ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 79

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಭಾನುವಾರ: 01-03-2026

**SEHRI & IFTARI TIME**

DAY SUNDAY
RAMZAN : 11
DATE: 01.03.2026
END TIME OF SEHRI :5:23 AM
FAJAR AZAAN : 5:28 AM

IFTAR TIME : 6:30 PM



ಸೈಯದ್ ಅಹ್ಮದ್ ಹುಸೇನಿ ಮತ್ ವಾಲೆ
ಕಾರ್ಯದರ್ಶಿಗಳು : ಮತ್ ವಾಲೆ ಸಾಹೇಬ್ ಪಬ್ಲಿಕ್ ಸ್ಕೂಲ್ ಮಾನ್ವಿ
ಸಂಪಾದಕರು : ಧೈರ್ಯದ ದಾರಿ ಕನ್ನಡ ದಿನಪತ್ರಿಕೆ

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

# ಮೊದಲ ದಿನ ಪರೀಕ್ಷೆ ಸುಸೂತ್ರ

**ಬೆಂಗಳೂರು, ಫೆ. 28–** ವಿದ್ಯಾರ್ಥಿ ಜೀವನದ ಪ್ರಮುಖ ಕಾಲಘಟ್ಟವೆಂದೇ ಹೇಳಲಾಗುವ ದ್ವಿತೀಯ ಪಿಯುಸಿ ಪರೀಕ್ಷೆಗಳು ರಾಜ್ಯಾದ್ಯಂತ ಆರಂಭವಾಗಿದ್ದು, ಮೊದಲ ದಿನ ಪರೀಕ್ಷೆಗಳು ಸುಸೂತ್ರವಾಗಿ ನಡೆದಿವೆ.

ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆ ನಡೆಸುವ ದ್ವಿತೀಯ ಪಿಯುಸಿ ಪರೀಕ್ಷೆಗೆ ಸುಮಾರು 7 ಲಕ್ಷ ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, ಪರೀಕ್ಷೆಯ ಮೊದಲ ದಿನವಾದ ಇಂದು ಕನ್ನಡ ಮತ್ತು ಅರೆಬಿಕ್ ವಿಷಯಗಳ ಪರೀಕ್ಷೆ ನಡೆಯಿತು. ಆರಂಭವಾಗಿರುವ ದ್ವಿತೀಯ ಪಿಯುಸಿ ಪರೀಕ್ಷೆಗಳು ಮಾರ್ಚ್ 17ರ ವರೆಗೂ ನಡೆಯಲಿದ್ದು, ಪರೀಕ್ಷೆಗಾಗಿ ರಾಜ್ಯಾದ್ಯಂತ 1217 ಕೇಂದ್ರಗಳನ್ನು ಆರಂಭಿಸಲಾಗಿದೆ.

ಮುಖ್ಯಮಂತ್ರಿ ಶುಭ ಸಂದೇಶ

ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುತ್ತಿರುವ ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಭ ಹಾರೈಸಿದ್ದಾರೆ.ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಅವರು ದ್ವಿತೀಯ ಪಿಯುಸಿ ಪರೀಕ್ಷೆ ಎದುರಿಸುತ್ತಿರುವ ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೆ ಶುಭ ಹಾರೈಕೆಗಳು.



ಆತ್ಮವಿಶ್ವಾಸದಿಂದ ಪರೀಕ್ಷೆ ಬರೆಯಿರಿ. ಉತ್ತಮ ಅಂಕಗಳ ಜತೆಗೆ ಉಜ್ವಲ ಭವಿಷ್ಯವು ನಿಮ್ಮದಾಗಲಿ ಎಂದು ಹಾರೈಸಿದ್ದಾರೆ.

ಪರೀಕ್ಷೆ ಕಟ್ಟೆಚ್ಚರ

ದ್ವಿತೀಯ ಪಿಯುಸಿ ಪರೀಕ್ಷೆಗೆ ಪ.ಪೂ. ಶಿಕ್ಷಣ ಇಲಾಖೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡು ಯಾವುದೇ ಅಕ್ರಮಗಳಿಗೆ ಅವಕಾಶ ಆಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದೆ.

ಪರೀಕ್ಷಾ ಕೇಂದ್ರದ ಸುತ್ತ ಸುಮಾರು 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆಯನ್ನು ಜಾರಿ ಮಾಡಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತಲಿನ ಜೆರಾಕ್ಸ್ ಅಂಗಡಿ, ಸೈಬರ್ ಸೆಂಟರ್, ಕಂಪ್ಯೂಟರ್ ಶಾಪ್‌ಗಳನ್ನು ಬಂದ್ ಮಾಡಲಾಗಿದೆ.

ಪರೀಕ್ಷೆ ನಡೆಯುವ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಇಡೀ ಪರೀಕ್ಷಾ ವ್ಯವಸ್ಥೆಯನ್ನು ಮಾನಿಟರ್ ಮಾಡಲು ವೆಬ್‌ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದ್ದು, ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳು ವೆಬ್‌ಕಾಸ್ಟಿಂಗ್ ವ್ಯವಸ್ಥೆಯ ಉಸ್ತುವಾರಿ ನೋಡಿಕೊಂಡಿದ್ದಾರೆ.

ಪರೀಕ್ಷಾ ಕೇಂದ್ರಕ್ಕೆ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ, ಅಧಿಕಾರಿಗಳು ಮೊಬೈಲ್ ಫೋನ್ ಕೊಂಡೊಯ್ಯುವುದನ್ನು ನಿಷೇಧಿಸಲಾಗಿದೆ. ಹಾಗೆಯೇ ವಾಚ್ ಸೇರಿ ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆಗೂ ನಿಷೇಧ ಹೇರಲಾಗಿದೆ.

ಪ್ರತಿ ಕೇಂದ್ರದಲ್ಲೂ ಸಿಟ್ಟಿಂಗ್ ಸ್ಕ್ವಾಡ್, ಫ್ಲೈಯಿಂಗ್ ಸ್ಕ್ವಾಡ್ ಜತೆಗೆ ಪ್ರತಿ ಪರೀಕ್ಷಾ ಕೇಂದ್ರಕ್ಕೂ ಪೊಲೀಸ್ 2ನೇಪುಟಕ್ಕೆ►

# ಜಾಲಪೂರು ಗ್ರಾಮದಲ್ಲಿ ಆಕಸ್ಮಿಕ ಬೆಂಕಿ ಮನೆ ಭಸ್ಮ, ಲಕ್ಷಾಂತರ ರೂಪಾಯಿ ನಷ್ಟ

ಧೈರ್ಯದ ದಾರಿ



**ಸಿರವಾರ,ಫೆ.28–** ತಾಲೂಕಿನ ಜಾಲಪೂರು ಗ್ರಾಮದಲ್ಲಿ ಗುರುವಾರ ಬೆಳಿಗ್ಗೆ ಸಂಭವಿಸಿದ ಆಕಸ್ಮಿಕ ಅಗ್ನಿ ಅವಘಡದಲ್ಲಿ ಯಮುನಪ್ಪ ಎಂಬುವವರ ಮನೆ ಸಂಪೂರ್ಣವಾಗಿ ಬೆಂಕಿಗೆ ಆಹುತಿಯಾಗಿದ್ದು, ಅಪಾರ ಪ್ರಮಾಣದ ಆಸ್ತಿ ಪಾಸ್ತಿ ನಷ್ಟ ಸಂಭವಿಸಿದೆ.

**ಘಟನೆಯ ವಿವರ:** ಗ್ರಾಮದ ನಿವಾಸಿ ಯಮುನಪ್ಪ ಅವರು ತಮ್ಮ ಐವರು ಮಕ್ಕಳು (ಮೂವರು ಹೆಣ್ಣು ಮಕ್ಕಳು ಹಾಗೂ ಇಬ್ಬರು ಗಂಡು ಮಕ್ಕಳು) ಮತ್ತು ಕುಟುಂಬದೊಂದಿಗೆ ಒಂದೇ ಮನೆಯಲ್ಲಿ ವಾಸವಿದ್ದರು. ಗುರುವಾರ ಬೆಳಿಗ್ಗೆ ಕುಟುಂಬದವರೆಲ್ಲರೂ ಮದುವೆ ಸಮಾರಂಭವೊಂದಕ್ಕೆ ತೆರಳಿದ್ದ ಸಂದರ್ಭದಲ್ಲಿ ಈ ಅವಘಡ ಸಂಭವಿಸಿದೆ.

ಬೆಳಿಗ್ಗೆ ಸುಮಾರು 11 ಗಂಟೆಯ ವೇಳೆಗೆ ಮನೆಯಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ (ವಿದ್ಯುತ್ ತಂತಿಗಳ ಘರ್ಷಣೆ) ಉಂಟಾಗಿ ಬೆಂಕಿ ಹತ್ತಿಕೊಂಡಿದೆ. ಕ್ಷಣಾರ್ಧದಲ್ಲಿ ಬೆಂಕಿಯ ಕೆನ್ನಾಲಿಗೆ ಇಡೀ ಮನೆಗೆ ವ್ಯಾಪಿಸಿದ್ದು, ಮನೆಯ ಶೇಕಡಾ 70ರಷ್ಟು ಭಾಗ ನಾಶವಾಗಿದೆ.

**ನಷ್ಟದ ಅಂದಾಜು:** ಬೆಂಕಿಯ ಭೀಕರತೆಗೆ ಮನೆಯಲ್ಲಿದ್ದ ಪೀಠೋಪಕರಣಗಳು ಹಾಗೂ ದವಸ ಧಾನ್ಯಗಳು ಸುಟ್ಟು ಕರಕಲಾಗಿವೆ. ಅದರೊಂದಿಗೆ ಸುಮಾರು 55 ಸಾವಿರ ರೂಪಾಯಿ ನಗದು ಹಾಗೂ 2 ರಿಂದ 3 ತೊಲೆ ಚಿನ್ನಾಭರಣ ಬೆಂಕಿಯಲ್ಲಿ ನಾಶವಾಗಿದ್ದು, ಕುಟುಂಬವು ಕಷ್ಟಪಟ್ಟು ಸಂಪಾದಿಸಿದ ಆಸ್ತಿಯನ್ನು ಕಳೆದುಕೊಂಡು ಕಂಗಾಲಾಗಿದೆ.

ಸ್ಥಳೀಯರು ಬೆಂಕಿ ನಂದಿಸಲು ಪ್ರಯತ್ನಿಸಿದರಾದರೂ ಅಷ್ಟರಲ್ಲಾಗಲೇ ಹೆಚ್ಚಿನ ಹಾನಿ ಸಂಭವಿಸಿತ್ತು. ಸಂತ್ರಸ್ತ ಕುಟುಂಬಕ್ಕೆ ಸರ್ಕಾರ ತಕ್ಷಣವೇ ಸೂಕ್ತ ಪರಿಹಾರ ನೀಡಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ರಂಜಾನ್ ಹಾಗೂ ಹೋಳಿ ಹಬ್ಬದ ಅಂಗವಾಗಿ ಶಾಂತಿ ಸಭೆ

ಧೈರ್ಯದ ದಾರಿ



**ಮಾನ್ವಿ,ಫೆ.28–** ಪಟ್ಟಣದ ಪೊಲೀಸ್ ಠಾಣೆಯಲ್ಲಿ ರಂಜಾನ್ ಹಾಗೂ ಹೋಲಿ ಹಬ್ಬದ ಅಂಗವಾಗಿ ಹಿಂದು ಮತ್ತು ಮುಸ್ಲಿಂ ಸಮುದಾಯದವರ ಶಾಂತಿ ಸಭೆಯಲ್ಲಿ ಸಿಂಧನೂರು ಗ್ರಾಮೀಣ ಡಿ.ವೈ.ಎಸ್.ಪಿ. ಚಂದ್ರಶೇಖರ ಮಾತನಾಡಿ ರಂಜಾನ್ ಮತ್ತು ಹೋಲಿ ಹಬ್ಬಗಳ ಸಮಯದಲ್ಲಿ ಹಿಂದು ಮತ್ತು ಮುಸ್ಲಿಂ ಸಮುದಾಯದವರು ಶಾಂತಿಯುತವಾಗಿ ಸೌಹಾರ್ಧಯುತವಾಗಿ ಎರಡು ಸಮುದಾಯಗಳು ಆಚರಣೆ ಮಾಡಬೇಕು. ಯಾವುದೇ ವದಂತಿಗಳಿಗೆ ಅವಕಾಶ ನೀಡದೆ ಸಮುದಾಯಗಳ ಮುಖಂಡರು ಮಾರ್ಗದರ್ಶನ ಮಾಡಬೇಕು ಮಾ.3 ರಂದು ಬರುವ ಹೋಲಿ ಹಬ್ಬದ ಸಮಯದಲ್ಲಿ ಆರೋಗ್ಯದ ಮೇಲೆ ಗಂಭಿರವಾಗಿ ಪರಿಣಾಮ ಬೀರುವ ರಾಸಾಯನಿಕ ಬಣ್ಣಗಳನ್ನು ಬಳಸದೆ ನೈಸರ್ಗಿಕವಾದ ಆರೋಗ್ಯಕ್ಕೆ ಉತ್ತಮ ವಾದ ಬಣ್ಣಗಳನ್ನು ಮಾತ್ರ ಬಳಸಿ ಮಧ್ಯಾಹ್ನ 1 ಗಂಟೆಯೊಳಗಾಗಿ ಕಡ್ಡಾಯವಾಗಿ ಬಣ್ಣದಾಟವನ್ನು ಮುಗಿಸಬೇಕು. ಪಿ.ಯು.ಸಿ. ದ್ವಿತೀಯ ವರ್ಷದ ಪರೀಕ್ಷೆಗಳು ಬಂದಿರುವುದರಿಂದ ಶಾಲೆಗಳ ಹತ್ತಿರ ಹೋಗಿ ಯುವಕರು ವಿದ್ಯಾರ್ಥಿನಿಯರ ಮೇಲೆ ಬಲವಂತವಾಗಿ ಬಣ್ಣಗಳನ್ನು ಎರಚುವುದನ್ನು ಮಾಡಬರದು. ಅನ್ಯ ಧರ್ಮಿಯರಿಗೆ ಹಾಗೂ ಬಲವಂತವಾಗಿ ಯಾರಿಗೂ ಕೂಡ ಬಣ್ಣಗಳನ್ನು ಹಾಕ ಬಾರದು, ಹೋಲಿ ಹಬ್ಬದ ಸಮಯದಲ್ಲಿ ಶಾಂತಿ ಭಂಗಮಾಡುವವರ ಮೇಲೆ ಕಾನೂನು ಕ್ರಮ ಕೈಗೊಳ್ಳಲಾ ಗುವುದು ರಂಜಾನ್ ಹಬ್ಬದ ಸಮಯದಲ್ಲಿ ಕೂಡ ಶಾಂತಿ ಕಾಪಡುವಂತೆ ತಿಳಿಸಿದರು.

ಪಿ.ಐ, ಸೋಮಶೇಖರ್‌ಎಸ್.ಕೆಂಚರೆಡ್ಡಿ ರಂಜಾನ್ ಹಾಗೂ ಹೋಲಿ ಹಬ್ಬದ ಆಚರಣೆ ಕುರಿತು ಅಗತ್ಯ ಸೂಚನೆಗಳನ್ನು ನೀಡಿದರು.

ಶಾಂತಿ ಸಭೆಯಲ್ಲಿ ಹಿರಿಯ ವಕೀಲರಾದ ಎ.ಬಿ, ಉಪ್ಪಳಮಠ, ಮುಸ್ಲಿಂ ಧರ್ಮಗುರುಗಳಾದ ಸೈಯಾದ್ ಸಜ್ಜಾದ್ ಹುಸ್ಸೈನಿ ಮತವಾಲೇ, ಶೇಖ ಫರೀದ್ ಉಮ್ರಿ. ವೆಂಕಟೇಶನಾಯಕ, ಬಸವನಗೌಡ, ರಾಮಣ್ಣ, ಶರಣಬಸವನಾಯಕ, ಹನುಮೇಶ ಸಾದಪುರ್, ಚಂದ್ರು.ಬಾಷಾ ಸಾಬ್ ಸೇರಿದಂತೆ ಹಿಂದು ಮತ್ತು ಸಮುಸ್ಲಿಂ ಸಮುದಾಯದ ಮುಖಂಡರು ಭಾಗವಹಿಸಿದರು.

# ಕನ್ನಡ ನಾಡು ನುಡಿಯ ಜಾತ್ರೆಯ ಯಶಸ್ಸಿಗೆ ಪ್ರತಿಯೊಬ್ಬರ ಸಹಕಾರ ಅಗತ್ಯ: ಎನ್.ಎಸ್.ಬಿ

ಧೈರ್ಯದ ದಾರಿ

**ಮಾನ್ವಿ:** ತಾಲೂಕಿನ ನೀರಮಾನ್ವಿ ಗ್ರಾಮದಲ್ಲಿನ ಶ್ರೀಸಿದ್ದಾರೂಢ ಮಠದಲ್ಲಿ 11ನೇ ತಾಲೂಕ ಕನ್ನಡ ಸಾಹಿತ್ಯ ಸಮ್ಮೇಳನ ಅಂಗವಾಗಿ ರಾಷ್ಟ್ರಧ್ವಜಾರೋಹಣವನ್ನು ಶಾಸಕ ಹಂಪಯ್ಯನಾಯಕ ನೆರವೇರಿಸಿದರು. ನಾಡಧ್ವಜವನ್ನು ಕ.ಸಾ.ಪ. ಜಿಲ್ಲಾಧ್ಯಕ್ಷರಾದ ರಂಗಣ್ಣ ಪಾಟೀಲ್ ಅಳ್ಳುಂಡಿ .ಪರಿಷತ್ ಧ್ವಜರೋಹಣವನ್ನು ತಾ.ಕಸಾಪ ಅಧ್ಯಕ್ಷರಾದ ಶರಣಬಸವ ನೀರಮಾನ್ವಿ ನೆರವೇರಿಸಿದರು. ಅದರ್ಶ ಶಾಲೆಯ ವಿದ್ಯಾರ್ಥಿಗಳು ರಾಷ್ಟ್ರಗೀತೆ ಮತ್ತು ನಾಡಗೀತೆಯನ್ನು ಹಾಡಿದರು.

ಈ ಸಂಧರ್ಭದಲ್ಲಿ ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಉದ್ಘಾಟಿಸಿ ಮಾತನಾಡಿ, ನಾಡು ನುಡಿ ವಿಷಯಕ್ಕೆ ಸಾಹಿತ್ಯ ಪರಿಷತ್ತು ಅನೇಕ ಹೋರಾಟಗಳು ಮಾಡಿಕೊಂಡು ಬಂದಿದೆ. ಬೆಟ್ಟದೂರು ಕುಟುಂಬ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಕೊಡುಗೆ ನೀಡಿದೆ. ಸದಾ ಕಾಲ ಕಾರ್ಯಕ್ರಮಗಳು ನಡೆಯಬೇಕು. ಕನ್ನಡ ಭವನ ನಿರ್ಮಿಸಲಾಗಿದೆ. ಗಡಿನಾಡಿನಲ್ಲಿ ಕನ್ನಡ ಭಾಷೆಗೆ ಹೆಚ್ಚು ಬಳಕೆ ಮಾಡಬೇಕು. ಈ ಭಾಗದ ನೀರಾವರಿ ತೊಂದೆರೆಯಾಗ್ತಿದೆ. ಗೇಟ್ ತೊಂದರೆಯಾಗಿದೆ. ಮುಂದಿನ ಬೆಳೆಗೆ ನೀರು ಕೊಡುವ ಪ್ರಯತ್ರ ಸರ್ಕಾರ ಮಾಡುತ್ತೆ. ಗಡಿ ಭಾಗದ ಕನ್ನಡಿಗರ ಸಮಸ್ಯೆ ಬಗೆಹರಿಸುವ ಕಾರ್ಯಗಳನ್ನು ಸರ್ಕಾರ ಮಾಡುತ್ತಿದೆ.

11ನೇ ತಾಲೂಕ ಮಟ್ಟದ ಸಾಹಿತ್ಯಸಮ್ಮೇಳನ ಉದ್ಘಾಟಿಸಿ ಶಹಾಪುರದ ಹಿರಿಯ ಸಾಹಿತಿ ಸಿದ್ಧಾರಾಮ ಹೊನ್ಕಲ್ ಮಾತನಾಡಿ, ಬರಹಗಾರನಿಗೆ ಕ್ರಿಯಾಶೀಲತೆ ಮುಖ್ಯ, ರಾಯಚೂರು ಜಿಲ್ಲೆಯಿಂದ ದಾಸ ಸಾಹಿತ್ಯದ ಕೊಡುಗೆ ಅಪಾರ, ಮಾನವೀಯ ಮೌಲ್ಯದ ಕವಿತಗಳ ಕಾಣೆಯಾಗಿದ್ದು, ಅವುಗಳನ್ನು ಹುಡಕಬೇಕಾದ ಕೆಲಸ ಇಂದಿನ ಸಮ್ಮೇಳನಗಳು ಮಾಡಬೇಕಿದೆ. ಕನ್ನಡವೆಂದರೆ ಕೇವಲ ಭಾಷೆ ಸಾಹಿತ್ಯವಲ್ಲ, ನಮ್ಮ ಸಂಸ್ಕೃತಿಯಾಗಬೇಕು ನಾವೆಲ್ಲರೂ ನಾಡು ನುಡಿ ಕಟ್ಟುವ ಕಾರ್ಯವಾಗಬೇಕಿದೆ.




ಬರವಣಿಗೆ ಎನ್ನುವುದು ಮನೋವೈಜ್ಞಾನಿಕ ಕ್ರಮವಾಗಿದೆ. ಜಾತಿ ಉಪಜಾತಿ ಸಂಕೋಲೆಯಲ್ಲಿ ಬಂದಿಯಾಗಿರುವ ಇಂತಹ ಸಮಯದಲ್ಲಿ ಬರಹಗಾರರಿಗೆ ಕ್ರಿಯಾಶೀಲತೆ ಮುಖ್ಯವಾಗಿದೆ. ವಿಜಯದಾಸರು, ಮನೋಹರ ವಿಠಲ ದಾಸರು, ಜಗನ್ನಾಥ ದಾಸರು, ಮಾನ್ವಿ ತಾಲೂಕನ್ನು ದಾಸಸಾಹಿತ್ಯದ ತೊಟ್ಟಿಲಾಗಿಸಿದ್ದಾರೆ. ಅವಿಭಾಜಿತ ಕೊಪ್ಪಳ ಜಿಲ್ಲೆಯಲ್ಲಿ ಬೆಟ್ಟದೂರು ಕುಟುಂಬದ ಕೊಡುಗೆ ಅಪಾರವಾಗಿದೆ. ಆ ಕುಟುಂಬದ ಡಾ.ಬಸವಪ್ರಭು ಪಾಟೀಲ್ ಬೆಟ್ಟದೂರು ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ವಿಶೇಷವಾಗಿದ್ದು. ಈ ನೆಲ ರಜಾಕರರ ಹಾಗೂ ನವಾಬರ ದುರಾಡಳಿತದ ಕಥಾನಕಗಳು ಜನಪದ ಸಾಹಿತ್ಯ ಹೋರಾಟದ ಕಿಚ್ಚನ್ನು ಹಚ್ಚಿದೆ. ಈ ನೆಲವು ದಾಸ ಸಾಹಿತ್ಯದ ವಚನ ಸಾಹಿತ್ಯ ಬಂಡಾಯ ಸಾಹಿತ್ಯದ ಪ್ರಮುಖ ನೆಲೆಯಾಗಿದ್ದು ಭಾಷೆಯ ಉಗಮದಿಂದ ಸಾಹಿತ್ಯದ ಉಗಮವಾಗುತ್ತದೆ. ಸಾಮಾಜಿಕ ಜವಾಬ್ದಾರಿಯಿಂದ ಸಾಮಾಜಿಕ ಪ್ರಜ್ಞೆ ಹೊಂದಿ ಸಾಹಿತ್ಯ ರಚಿಸುವುದು ಮುಖ್ಯವಾಗಿದ್ದು ಎಂದು ಅವರು ಹೇಳಿದರು.

ಕಸಾಪ ಜಿಲ್ಲಾಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ಆಶಯ ನುಡಿ, ರಾಯಚೂರು ಜಿಲ್ಲೆಯಲ್ಲಿ ಮಾನ್ವಿ ತಾಲೂಕಿನಲ್ಲಿ ಅತಿ ಹೆಚ್ಚು 11 ಸಾಹಿತ್ಯ ಸಮ್ಮೇಳ ಆಯೋಜಿಸುವ ಮೂಲಕ ಇತಿಹಾಸ ಸೃಷ್ಟಿಸಿದೆ. ಕಸಾಪ ನಾಡು ನುಡಿ ಕನ್ನಡ ಸಾಹಿತ್ಯ ಶ್ರೀಮಂತಿಕೆಯನ್ನು ಪ್ರದರ್ಶಿಸುವ ಅಂಗವಾಗಿ ಕನ್ನಡ ಸಾಹಿತ್ಯ ಸ್ಮಮೇಳನಗಳನ್ನು ಆಯೋಜಿಸುತ್ತ ಬಂದಿದ್ದು. ದಾಸ ಸಾಹಿತ್ಯದ ತೊಟ್ಟಿಲು ಎಂದು ಕರೆಯಲ್ಪಡುವ ಮಾನ್ವಿ ತಾಲೂಕಿನ ಗ್ರಾಮೀಣ ಭಾಗದಲ್ಲಿ ಈ ಬಾರಿ ನಡೆಯುತ್ತಿರುವ ತಾಲೂಕ ಮಟ್ಟದ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಭಾಷಾ ಸಾಹಿತ್ಯದ ತಲ್ಲಣಗಳಿಗೆ ಬರಹಗಾರರು ಸಾಹಿತಿಗಳು ಕವಿಗಳು ಒಂದೆಡೆ ಸೇರಿ ಉತ್ತರಗಳನ್ನು ಕಂಡುಕೊಳ್ಳಲಿ ಎಂದು ಅಶಯ ವ್ಯಕ್ತಪಡಿಸಿದರು.




**11 ನೇ ತಾಲೂಕು ಮಟ್ಟದ ಸಾಹಿತ್ಯ ಸಮ್ಮೇಳನದ ಅಂಗವಾಗಿ ವಿವಿಧ ಗೋಷ್ಠಿಗಳು**

ತಾಲೂಕಿನ ಶ್ರೀಸಿದ್ದಾರೂಢ ಮಠದ ಅವರಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕದವತಿಯಿಂದ ಹಮ್ಮಿಕೊಂಡ 11 ನೇ ತಾಲೂಕು ಮಟ್ಟದ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮದ ಲಿಂ. ಡಾ.ರಾಜಶೇಖರ ನೀರಮಾನ್ವಿ ಮುಖ್ಯ ವೇದಿಕೆಯಲ್ಲಿ ನಡೆದ ವಿಚಾರ ಗೋಷ್ಠಿ ಕಾರ್ಯಕ್ರಮದಲ್ಲಿ ರೈತರ ಅತ್ಮಹತ್ಯೆ ಹಾಗೂ ಪರಿಹಾರ ವಿಷಯದ ಕುರಿತು ಕರ್ನಾಟಕ ರಾಜ್ಯ ಸಂಘದ ರಾಜ್ಯ ಗೌರವಾಧ್ಯಕ್ಷರಾದ ಚಾಮರಸ ಪಾಟೀಲ್ ಉಪನ್ಯಾಸ ನೀಡಿ. ದೇಶದಲ್ಲಿ 4 ಲಕ್ಷ ರೈತರು, ರಾಜ್ಯದಲ್ಲಿ 20 ಸಾವಿರ ರೈತರು ಅತ್ಮಹತ್ಯ ಮಾಡಿಕೊಳ್ಳುವುದಕ್ಕೆ ಕೇಂದ್ರ ಮತ್ತು ರಾಜ್ಯಸರ್ಕಾರಗಳ ರೈತ ವಿರೋಧಿ ನೀತಿಗಳು ಕಾರಣವಾಗಿದೆ ಅದರೆ ಸಂಸತ್ತಿನಲ್ಲಿ ರೈತ ಅತ್ಮಹತ್ಯ ಕುರಿತು ಗಂಭಿರವಾದ ಚರ್ಚೆಗಳೆ ನಡೆಯುತ್ತಿಲ್ಲ ಸರ್ಕಾರವು ಕೃಷಿ ಇಲಾಖೆ ಮೂಲಕ ನೀಡುತ್ತಿರುವ ಸಹಾಯದಾನ ಮಧ್ಯವಾರ್ಥಿಗಳ ಪಾಲಗುತ್ತಿದೆ. ರೈತರಿಗೆ ಮಾರುಕಟ್ಟೆಯಲ್ಲಿ ಉತ್ತಮ ಲಾಭದಾಯಕ ಬೆಲೆ ದೊರೆಯುತ್ತಿಲ್ಲ ಎಂದು ತಿಳಿಸಿದರು.

ಗೋಷ್ಠಿಯ ಅಧ್ಯಕ್ಷತೆ ವಹಿಸಿ ತಾ.ಕಸಾಪ ಮಾಜಿ ಅಧ್ಯಕ್ಷರಾದ ಕೆ.ಈ.ನರಸಿಂಹ ಮಾತನಾಡಿದರು.

ಮಾನ್ವಿ ತಾಲೂಕಿನ ಇತಿಹಾಸ ಕುರಿತು ಉಪನ್ಯಾಸಕಿ ಚಂದ್ರಕಲಾ ಉಪನ್ಯಾಸ ನೀಡಿ ಜಿಲ್ಲೆಯಲ್ಲಿ 13 ರಿಂದ 16 ನೇ ಶತಮಾನದಲ್ಲಿ 200 ಕ್ಕೂ ಹೆಚ್ಚು ದಾಸ ಶ್ರೇಷ್ಟರನ್ನು ಕಾಣಬಹುದಾಗಿದೆ ಅದ್ದರಿಂದ ರಾಯಚೂರು ಜಿಲ್ಲೆಯನ್ನು ದಾಸ ಸಾಹಿತ್ಯದ ತೋಟ್ಟಿ:ಲು ಎಂದು ಕರೆಯಲಾಗುತ್ತಿದೆ. ಮಾನ್ವಿ 2ನೇಪುಟಕ್ಕೆ►



ಮೊದಲನೇ ಪುಟದಿಂದ

# ಮೊದಲ ದಿನ ಪರೀಕ್ಷೆ ಸುಸೂತ್ರ

ಭದ್ರತೆಯನ್ನು ಮಾಡಲಾಗಿದೆ.ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಬಗ್ಗೆ ಸುಳ್ಳು ಸುದ್ದಿ ಹರಡುವವರ ಬಗ್ಗೆಯೂ ಪೊಲೀಸ್ ಇಲಾಖೆ ನಿಗಾ ಇಟ್ಟಿದೆ.

ಪರೀಕ್ಷಾ ವೇಳಾಪಟ್ಟಿ

ಇಂದು ಕನ್ನಡ ಅರೇಬಿಕ್ ಪರೀಕ್ಷೆ ನಡೆದಿದ್ದರೆ, ಮಾರ್ಚ್ 2 ಭೂಗೋಳ ಶಾಸ್ತ್ರ, ಸಂಖ್ಯಾಶಾಸ್ತ್ರ, ಮನಃಶಾಸ್ತ್ರ ಪರೀಕ್ಷೆ, ಮಾ. 3 ರಂದು ಇಂಗ್ಲೀಷ್ ಪರೀಕ್ಷೆ, ಮಾ. 4 ರಂದು ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್ ಪರೀಕ್ಷೆ, ಮಾ. 5 ರಂದು ಇತಿಹಾಸ ವಿಷಯದ ಪರೀಕ್ಷೆ, ಮಾ. 6 ರಂದು ಭೌತಶಾಸ್ತ್ರ ವಿಷಯದ ಪರೀಕ್ಷೆ, ಮಾ. 7 ಐಚ್ಛಿಕ ಕನ್ನಡ, ವ್ಯವಹಾರ ಅಧ್ಯಯನ, ಭೂಗರ್ಭ ಶಾಸ್ತ್ರ ವಿಷಯಗಳ ಪರೀಕ್ಷೆ, ಮಾ. 9 ರಂದು ರಾಸಾಯನಶಾಸ್ತ್ರ, ಶಿಕ್ಷಣ ಶಾಸ್ತ್ರ, ಮೂಲಗಣಿತ ವಿಷಯಗಳ ಪರೀಕ್ಷೆ, ಮಾ. 10 ರಂದು ಅರ್ಥಶಾಸ್ತ್ರ ವಿಷಯ ಪರೀಕ್ಷೆ, ಮಾ. 11 ರಂದು ತರ್ಕ ಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗೃಹ ವಿಜ್ಞಾನ ವಿಷಯಗಳ ಪರೀಕ್ಷೆ, ಮಾ. 12 ಹಿಂದಿ ಪರೀಕ್ಷೆ, ಮಾ. 13 ರಾಜ್ಯಶಾಸ್ತ್ರ ವಿಷಯದ ಪರೀಕ್ಷೆ, ಮಾ. 14 ಗಣಿತ, ಲೆಕ್ಕಶಾಸ್ತ್ರ ವಿಷಯಗಳ ಪರೀಕ್ಷೆ, ಮಾ. 16 ಸಮಾಜ ಶಾಸ್ತ್ರ, ಜೀವಶಾಸ್ತ್ರ, ಗಣಕವಿಜ್ಞಾನ ವಿಷಯಗಳ ಪರೀಕ್ಷೆ, ಮಾ. 17 ರಂದು ಹಿಂದುಸ್ತಾನಿ ಸಂಗೀತ, ರೀಟೈಲ್ ಆಟೋ ಮೊಬೈಲ್, ಆರೋಗ್ಯ ರಕ್ಷಣೆ ವಿಷಯಗಳ ಪರೀಕ್ಷೆ ನಡೆಯಲಿದೆ.

ಈ ಎಲ್ಲಾ ಪರೀಕ್ಷೆಗಳನ್ನು ಸುಸೂತ್ರವಾಗಿ ನಡೆಸಲು ಅಗತ್ಯ ಇರುವ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗಿದ್ದು, ಪ್ರಶ್ನೆ ಪತ್ರಿಕೆಗಳನ್ನು ಜಿಲ್ಲಾ ಖಜಾನೆಯಲ್ಲಿ ಇಡಲಾಗಿದ್ದು, ಖಜಾನೆಯಿಂದ ಪರೀಕ್ಷಾ ಕೇಂದ್ರಗಳಿಗೆ ಪೊಲೀಸ್ ಬಿಗಿ ಭದ್ರತೆಯಲ್ಲಿ ಪ್ರಶ್ನೆ ಪತ್ರಿಕೆಗಳು ರವಾನೆಯಾಗಲಿದೆ. ಪ್ರಶ್ನೆ ಪತ್ರಿಕೆ ರವಾನೆ ವ್ಯವಸ್ಥೆಯನ್ನು ವಿಡಿಯೋ ಚಿತ್ರೀಕರಣ ಮಾಡಲಾಗಿದ್ದು, ಯಾವುದೇ ಅಕ್ರಮಕ್ಕೆ ಅವಕಾಶ ಇಲ್ಲದಂತೆ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಆಲ್ ಟಿಕೆಟ್ ತೋರಿಸಿ ಉಚಿತ ಪ್ರಯಾಣಕ್ಕೂ ಅವಕಾಶ ಕಲ್ಪಿಸಲಾಗಿದೆ.

ಯಾದಗಿರಿಯಲ್ಲಿ ಗೊಂದಲ

ದ್ವಿತೀಯ ಪಿಯುಸಿ ಪರೀಕ್ಷೆಯ ಮೊದಲ ದಿನ ಯಾದಗಿರಿಯಲ್ಲಿ ಪಿಯು ಮಂಡಳಿ ಹಾಗೂ ಕಾಲೇಜಿನ ಎಡವಟ್ಟಿನಿಂದ ವಿದ್ಯಾರ್ಥಿಗಳು ಗೊಂದಲಕ್ಕೆ ಒಳಗಾದರು.

ಪರೀಕ್ಷಾ ಕೇಂದ್ರ ಇರುವುದು ಒಂದು ಕಡೆಯಾದರೂ ಪರೀಕ್ಷಾ ನೋಂದಣಿ ಪತ್ರದಲ್ಲಿ ನಮೂದಿಸಿರುವ ವಿಳಾಸವೇ ಬೇರೆಯಾದ ಕಾರಣ ಯಾದಗಿರಿಯಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರ ಹುಡಕಲು ಪರದಾಡಿದರು.

ಯಾದಗಿರಿ ನಗರ ಪ್ರಭಾ ಪಿಯು ಕಾಲೇಜಿನ ಪರೀಕ್ಷಾ ಕೇಂದ್ರದ ವಿಚಾರದಲ್ಲಿ ಗೊಂದಲ ಉಂಟಾಗಿದ್ದು, ಕಾಲೇಜು ಇರುವುದು ರುಂಬಿನಿ ಪಾರ್ಕ್ ಹತ್ತಿರವಾದರೆ ಆಲ್‌ಟಿಕೆಟ್‌ನಲ್ಲಿ ಗಂಜ್ ರೋಡ್ ಎಂದು ನಮೂದಿಸಲಾಗಿತ್ತು. ಹೀಗಾಗಿ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕಾಗಿ ಹುಡುಕಾಡಿ ಕೊನೆಗೆ ಸ್ಥಳೀಯರ ಸಹಾಯದಿಂದ ಪ್ರಭಾ ಪಿಯು ಕಾಲೇಜನ್ನು ನಿಗದಿತ ಸಮಯಕ್ಕೆ ತಲುಪಿ ನಿಟ್ಟುಸಿರು ಬಿಟ್ಟರು.

ಪಿಯುಸಿ ಪರೀಕ್ಷೆಗೆ ಹೊರಟಿದ್ದ ವಿದ್ಯಾರ್ಥಿನಿ ಹೃದಯಾಘಾತದಿಂದ ಸಾವು

ಚಿಕ್ಕೋಡಿ,ಫೆ.28– ದ್ವಿತೀಯ ಪಿಯುಸಿ ಪರೀಕ್ಷೆಗೆ ಹೊರಟಿದ್ದ ವಿದ್ಯಾರ್ಥಿನಿಯು ಹೃದಯಾಘಾತದಿಂದ ಸಾವನ್ನಪ್ಪಿರುವ ದುರ್ಘಟನೆ ಬಂಬಲವಾಡ ಗ್ರಾಮದಲ್ಲಿ ನಡೆದಿದೆ.

ಬಂಬಲವಾಡ ಗ್ರಾಮದ ಭೂಮಿಕಾ ಮಾಳಂಗಿ (17) ಮೃತ ದುರ್ದೈವಿ. ಪರೀಕ್ಷೆಗೆ ಸಕಲ ತಯಾರಿ ಮಾಡಿಕೊಂಡಿದ್ದ ಭೂಮಿಕಾ ಇಂದು ಉತ್ಸಾಹದಿಂದಲೇ ಪರೀಕ್ಷೆಗೆ ಹೊರಡಲು ತಯಾರಾಗಿದ್ದರು.

ಆದರೆ ವಿಧಿಯ ಆಟ ಬೇರೆಯೇ ಆಗಿತ್ತು. ಸ್ನಾನ ಮುಗಿಸಿ ಮನೆಯಿಂದ ಹೊರಬರುತ್ತಿದ್ದಾಗಲೇ ಹಠಾತ್ ಹೃದಯಾಘಾತ ಸಂಭವಿಸಿದೆ.ಕೂಡಲೇ ಪೋಷಕರು ಆಕೆಯನ್ನು ಸ್ಥಳೀಯ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆಯೇ ಅಸುನೀಗಿದ್ದಾರೆ. ದುರ್ಘಟನೆಯಿಂದ ಚಿಕ್ಕೋಡಿ ತಾಲೂಕಿನ ಬಂಬಲವಾಡ ಗ್ರಾಮದಲ್ಲಿ ಶೋಕದ ವಾತಾವರಣ ನಿರ್ಮಾಣವಾಗಿದೆ.

# ಕನ್ನಡ ನಾಡು ನುಡಿಯ ಜಾತ್ರೆಯ ಯಶಸ್ಸಿಗೆ ಪ್ರತಿಯೊಬ್ಬರ ಸಹಕಾರ ಅಗತ್ಯ: ಎನ್.ಎಸ್.ಬಿ

ತಾಲೂಕಿನಲಿ ದಾಸರಲ್ಲಿ ಪ್ರಮುಖರಾದವರು ವಿಜಯದಾಸರು.ಜಗನ್ನಾಥದಾಸರು ಸೇರಿ 10 ಕ್ಕೂ ಹೆಚ್ಚು ದಾಸರನ್ನು ಕಾಣಬಹುದಾಗಿದೆ. ಪ್ರಮುಖರಾಗಿದ್ದಾರೆ ಇವರು ರಚಿಸಿದ ಕಿರ್ತನೆಗಳು,ಸುಳಾದಿಗಳು. ಉಗಭೋಗಗಳು,ಪ್ರಸಿದ್ಧವಾಗಿವೇ ಎಂದು ತಿಳಿಸಿದರು.

ಮಾನ್ವಿ ತಾಲೂಕಿನ ಶಿಲಾಶಸನಗಳ ಕುರಿತು ಇತಿಹಾಸ ಉಪನ್ಯಾಸಕ ಡಾ.ಚನ್ನಬಸವಪ್ಪ ಮಲ್ಕಂದಿನಿ ಉಪನ್ಯಾಸ ನೀಡಿ ಮಾನ್ವಿಯ ವಿವಿಧ ಗ್ರಾಮಗಳಲ್ಲಿ ದೊರೆಯುವ ಶೈವ,ಇಸ್ಲಾಂ,ವೈಷ್ಣವ ದೊರೆಗಳು ಆಳ್ವಿಕೆ ನಡೆಸಿರುವ ಕುರಿತು ಶಿಲಾಶಸನಗಳಲ್ಲಿ ಧಾರ್ಮಿಕ ,ಸಮಾಜಿಕ,ಶೈಕ್ಷಣಿಕ ವಿಷಯಗಳ ಬಗ್ಗೆ ಮಾಹಿತಿಯನ್ನು ಕಾಣಬಹುದಾಗಿದೆ ಬ್ರಹ್ಮಣ ಸಮುದಾಯದವರಿಗೆ ದಾನವಾಗಿ ನೀಡಿದ ಅಗ್ರಾಹರಗಳು, ಬ್ರಹ್ಮಪುರಿಗಳು,ವಿದ್ಯಾಕೇಂದ್ರಗಳು, ಮಲ್ಲಟ 11 ನೇ ಶತಮಾನದ ಉನ್ನತ ವಿದ್ಯಾಕೇಂದ್ರವಾಗಿತ್ತು ಸೇರಿದಂತೆ ವಿವಿಧ ವಿಷಯಗಳನ್ನು ನಾವು ಶಿಲಾಶಾಸನಗಳ ಅಧ್ಯಾಯನದ ಮೂಲಕ ತಿಳಿದು ಕೊಳ್ಳಬಾಹುದಾಗಿದೆ ಅದ್ದರಿಂದ ತಮ್ಮ ಗ್ರಾಮಗಳಲ್ಲಿನ ಶಿಲಾ ಶಾಸನಗಳನ್ನು ಸಂರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಕಸಾಪ ತಾಲೂಕ ಅಧ್ಯಕ್ಷ ಶರಣಬಸವ ನೀರಮಾನ್ವಿ, ಮಾಜಿ ಶಾಸಕರಾದ ಬಸವನಗೌಡ ಬ್ಯಾಗವಾಟ, ಗಂಗಾಧರ ನಾಯಕ. ರಾಜಾವೆಂಕಟಪ್ಪ ನಾಯಕ, ನಯೋಪ್ರ ಅಧ್ಯಕ್ಷ ಗಫೂರ್ ಸಾಬ್, ಟಿಎಪಿಸಿಎಂಎಸ್ ಅಧ್ಯಕ್ಷ ತಿಮ್ಮಾರೆಡ್ಡಿ ಭೋಗಾವತಿ, ಗ್ಯಾರೆಂಟಿ ಸಮಿತಿ ಅಧ್ಯಕ್ಷ ಬಿಕೆ ಅಮರೇಶಪ್ಪ, ಕಾಂಗ್ರೆಸ್ ಮುಖಂಡ ಬಾಲಸ್ವಾಮಿ ಕೊಡ್ಲಿ, ಶಿವರಾಜ ನಾಯಕ, ಸಿದ್ದನಗೌಡ ಪಾಟೀಲ್, ಕೆ.ಶಾಂತಪ್ಪ, ಸಿದ್ರಾಮಪ್ಪ ನೀರಮಾನ್ವಿ, ರಾಶಾ ಸುಭಾಷ್ ನಾಯಕ, ಲಕ್ಷ್ಮೀದೇವಿ ನಾಯಕ, ಪಂಪನಗೌಡ ನೀರಮಾನ್ವಿ, ಮೌನೇಶಗೌಡ, ಅಶೋಕ ತಡಕಲ್, ಚಂದ್ರಶೇಖರ ದೊಡ್ಡಮನಿ, ಬುಡ್ಡಸಾಬ್, ಶ್ರೀರಾಮುಲು, ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ತಾಯಪ್ಪ ಬಿ.ಹೊಸೂರು, ಸ್ವಾಗತ ಸಮಿತಿ ಕೋಶಾಧ್ಯಕ್ಷರಾದ ಹೆಚ್.ಶರ್ಫುದ್ದೀನ್ ಪೋತ್ನಾಳ, ತಾ.ಕಸಾಪ ಕಾರ್ಯದರ್ಶಿಗಳಾದ ಲಕ್ಷ್ಮಣ್ ಜಾನೇಕಲ್, ಜಿ.ಎಸ್.ಬಾಲಾಜಿಸಿಂಗ್, ರವಿಶರ್ಮ, ಪ.ಜಾ.ಪ್ರತಿನಿಧಿ ಪ್ರೀತಮ್ ಕೊಡ್ಲಿ, ಹೋಬಳಿ ಘಟಕ ಅಧ್ಯಕ್ಷ ಹನುಮಂತಪ್ಪ ಕೊಟ್ನೆಕಲ್, ತಾಕಸಾಪ ಅಜೀವ ಸದಸ್ಯರಾದ ಪಿ.ಪರಮೇಶ, ಯಂಕಣ್ಣ ಯಾದವ್, ಮಾರೆಪ್ಪ ದೊಡ್ಡಮನಿ ಸೇರಿದಂತೆ ಇನ್ನಿತರರು ಇದ್ದರು.

# ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತಕ್ಕಾಗಿ ಎನ್‌ಎಸ್‌ಪಿ ನೋಂದಣಿಗೆ ಸೂಚನೆ

**ರಾಯಚೂರು ಫೆ,28–** ಜಿಲ್ಲೆಯ ಮಾನ್ವಿ ತಾಲೂಕಿನ ವಿವಿಧ ಪ್ರೌಢಶಾಲೆಗಳಲ್ಲಿ 9 ಮತ್ತು 10 ನೇ ತರಗತಿಯಲ್ಲಿ ಪಂಗಡದ ವಿದ್ಯಾರ್ಥಿಗಳಿಗೆ ಕೇಂದ್ರ ಸರಕಾರದ ಆದೇಶದಂತೆ 2025–2026ನೇ ಸಾಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನವನ್ನು ಮಂಜೂರಿಗೆ ನೋಂದಣಿ ಮಾಡಿಕೊಳ್ಳಬೇಕೆಂದು ಕೋರಲಾಗಿದೆ.

ಎನ್‌ಎಸ್‌ಪಿ ಓಟಿಆರ್ ನೋಂದಣಿ ಅವಶ್ಯಕವಾಗಿದ್ದು, ಈಗಾಗಲೇ ಎನ್‌ಎಸ್‌ಪಿ ಓಟಿಆರ್ ನೋಂದಣಿ ಮಾಡಲು ಬಾಕಿ ಇದ್ದ ಒಟ್ಟು 1006 ವಿದ್ಯಾರ್ಥಿಗಳಲ್ಲಿ ಈಗಾಗಲೇ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಸಹಕಾರದಿಂದ ಈ ಇಲಾಖೆಯ ನಿಲಯ ಪಾಲಕರು ಅಖಂಡ ಮಾನವಿ ತಾಲೂಕಿನ ಪ್ರತಿ ಶಾಲೆಗೆ ಭೇಟಿ ನೀಡಿ 9 ಮತ್ತು 10 ನೇ ತರಗತಿಯಲ್ಲಿ ಓದುತ್ತಿರುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಎನ್‌ಎಸ್‌ಪಿ ಓಟಿಆರ್ ನೋಂದಣಿ ಮಾಡಲಾಗಿರುತ್ತದೆ.

ಇನ್ನೂ ಸುಮಾರು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಎನ್‌ಎಸ್‌ಪಿ ಓಟಿಆರ್ ನೋಂದಣಿ ಕಾರ್ಯ ಬಾಕಿ ಇರುತ್ತದೆ. ಈ ವಿದ್ಯಾರ್ಥಿಗಳಿಗೆ ಭಾರತ ಸರಕಾರದ ಶಿಷ್ಯವೇತನ ಮಂಜೂರಾತಿ ಮಾಡಲು ಸಾಧ್ಯಾವಾಗಿರುವುದಿಲ್ಲ.

ಕಾರಣ ಎನ್‌ಎಸ್‌ಪಿ ಓಟಿಆರ್ ನೋಂದಣಿ ಮಾಡಲು ಬಾಕಿ ಇರುವ 9 ಮತ್ತು 10 ನೇ ತರಗತಿಯಲ್ಲಿ ಓದುತ್ತಿರುವ ಪರಿಶಿಷ್ಟ ಪಂಗಡದ ಎಲ್ಲಾ ವಿದ್ಯಾರ್ಥಿಗಳು ಕೂಡಲೇ ತಮ್ಮ ಶಾಲೆಯ ಮುಖ್ಯೋಪಾಧ್ಯಾಯರನ್ನು ಭೇಟಿ ಎನ್‌ಎಸ್‌ಪಿ ಓಟಿಆರ್ ಅನ್ನು https://scholarships.gov.in/ ಮಾಡಿಸಕಬೇಕೆಂದು ಮಾನ್ವಿ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

6360866626

# ರೌಡಿ ಶೀಟರ್, ಗಡಿಪಾರು ಆದವರು ಅಭಿವೃದ್ಧಿ ಬಗ್ಗೆ ಮಾತನಾಡುತ್ತಿರುವುದು ಹಾಸ್ಯಾಸ್ಪದ ; ಲಚ್ಚಪ್ಪ ಜಮಾದಾರ



**ಅಫಜಲಪುರ:ಫೆ.28:**ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿಗಳು ಆಧಾರ ರಹಿತವಾಗಿ ಶಾಸಕ ಎಂ.ವೈ.ಪಾಟೀಲ್,ಕೆಕೆಆರ್ ಟಿಸಿ ಅಧ್ಯಕ್ಷ ಅರುಣಕುಮಾರ ಪಾಟೀಲ್ ವಿರುದ್ಧ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ. ಜೆಡಿಎಸ್ ಮುಖಂಡರು ಈ ಹಿಂದೆ ಸಕ್ಕರೆ ಕಾರ್ಖಾನೆಯ ಜನರಲ್ ಮ್ಯಾನೇಜರ್ ಗೆ ರಸ್ತೆಯಲ್ಲಿ ತಡೆದು ಹಲ್ಲೆ ನಡೆಸಿ, ದರೋಡೆ ಮಾಡಿ, ರೌಡಿ ಶೀಟರ್ ಕೇಸ್ ಹಾಕಿಕೊಂಡು ಗಡಿಪಾರು ಆಗಿರುವವರು ಈಗ ಅಭಿವೃದ್ಧಿ ಕೆಲಸದ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಲಚ್ಚಪ್ಪ ಜಮಾದಾರ ಕಿಡಿಕಾರಿದರು.

ಪಟ್ಟಣದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು,ಕಾಂಗ್ರೆಸ್ ಪಕ್ಷದ ನಾಯಕರಿಗೆ ಜೆಡಿಎಸ್ ಪಕ್ಷದ ಮುಖಂಡರು ಬಹಿರಂಗ ಚರ್ಚೆಗೆ ಬನ್ನಿ ಎಂದು ಸವಾಲ್ ಹಾಕಿರುವುದು ಹಾಸ್ಯಾಸ್ಪದವಾಗಿದೆ.ಬಹಿರಂಗ ಚರ್ಚೆ ಏಕೆ ಬೇಕಿದ್ದರೆ ನೇರ ನೇರ ಚರ್ಚೆ ಮಾಡೋಣ ಬನ್ನಿ, ಈ ಹಿಂದೆ ರಕ್ಷಣಾ ವೇದಿಕೆ ಹೆಸರಿನ ಮೇಲೆ ಇವರು ಹಫ್ತಾ ವೇದಿಕೆ ಮಾಡಿಕೊಂಡು ನೂರಾರು ಅಧಿಕಾರಿಗಳ ಮೇಲೆ ದೂರು ಕೊಟ್ಟು ಏನೆಲ್ಲಾ ಮಾಡಿದ್ದಾರೆ. ಅಲ್ಲದೇ ಒಂದೇ ಒಂದು ಪ್ರಕರಣವೂ ಕೂಡ ಅಂತ್ಯಕ್ಕೆ ತೆಗೆದುಕೊಂಡು ಹೋಗದೆ ಕೇವಲ ಅರಬಿ ಹಾವು ಬಿಡುವದು ನಡೆದಿದೆ ಅಷ್ಟೇ. ಕೇಂದ್ರದಲ್ಲಿ ನಿಮ್ಮದೇ ಪಕ್ಷದ ಎಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿದ್ದಾರೆ,ಹೀಗಾಗಿ ಕೇಂದ್ರ ಸರ್ಕಾರದಿಂದ ಅನುದಾನ ತಂದು ಅಫಜಲಪುರ ಅಭಿವೃದ್ಧಿಗೆ ಸಹಕರಿಸಿ,ಅದು ಬಿಟ್ಟು ದಿನ ಬೆಳಗಾದರೆ ಸಾಕು ಪತ್ರಿಕಾಗೋಷ್ಠಿ ನಡೆಸುವ ಚಾಳಿ ನಿಲ್ಲಿಸಿ,ಈ ಹಿಂದೆ ಭೀಮಾ ನದಿ ನೀರಿಗಾಗಿ ಉಪವಾಸ ಸತ್ಯಾಗ್ರಹ ಕೈಗೊಂಡಾಗ ಶಾಸಕರು ಸೇರಿದಂತೆ ಎಲ್ಲರೂ ಬೆಂಬಲಿಸಿದ್ದಕ್ಕೆ ಹೋರಾಟ ಯಶಸ್ವಿಯಾಗಿತ್ತು.

ಈಗ ಕುಮಾರಸ್ವಾಮಿಯು ಮೂಲಕ ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಮೇಲೆ ಒತ್ತಡ ಹಾಕಿ ಭೀಮಾ ನದಿಯ ಸಮಸ್ಯೆ ಶಾಶ್ವತವಾಗಿ ಬಗೆಹರಿಸಿ,ಅಲ್ಲದೇ ನಿಮ್ಮ ಗ್ರಾಮ ಮತ್ತು ಅಕ್ಕ ಪಕ್ಕದ ಗ್ರಾಮಗಳಲ್ಲಿ ಬಸ್ ನಿಲ್ದಾಣಗಳು ಇಲ್ಲ,ಹೀಗಾಗಿ ಕೆಕೆಆರ್ ಟಿಸಿ ಅಧ್ಯಕ್ಷರಿಗೆ ಹೇಳಿ ಬಸ್ ನಿಲ್ದಾಣಗಳು ಮಾಡಿಕೊಳ್ಳಿ ಇದರಿಂದ ಅಭಿವೃದ್ಧಿ ಆಗಲಿದೆ.ನಾನು ಕೂಡ ಘತ್ತರಗಾ ಗ್ರಾಮಕ್ಕೆ ಬಸ್ ನಿಲ್ದಾಣ ಮಾಡಿ ಎಂದು ಮನವಿ ಮಾಡಿದ್ದೇನೆ.ಕೆಕೆಆರ್ ಟಿಸಿ ಅಧ್ಯಕ್ಷರು 1 ಕೋಟಿ ವೆಚ್ಚದಲ್ಲಿ ಬಸ್ ನಿಲ್ದಾಣ ಮಾಡೋಣ ಎಂದು ಭರವಸೆ ನೀಡಿದ್ದಾರೆ. ಕಾಂಗ್ರೆಸ್ ಪಕ್ಷದ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶರಣು ಕುಂಬಾರ ಸೇರಿದಂತೆ ಅನೇಕ ಮುಖಂಡರು ಪತ್ರಿಕಾಗೋಷ್ಠಿ ನಡೆಸಿದ್ದಕ್ಕೆ ಅವರ ವಿರುದ್ಧವು ಇಲ್ಲ ಸಲ್ಲದ ಆರೋಪ ಮಾಡುತ್ತಿರುವುದು ಖಂಡನೀಯವಾಗಿದೆ.

# ಮನೆಮನೆಯ ಕಥೆ ಬಿಚ್ಚಿಟ್ಟ ಕಾಲಚಕ್ರ ನಾಟಕ



**ಕಲಬುರಗಿ,ಫೆ.28:**ಮರಾಠಿ ರಂಗಭೂಮಿಯ ಖ್ಯಾತ ನಾಟಕಕಾರ ಜಯವಂತ ದಳವಿ ಅವರು ರಚಿಸಿದ ಎಚ್.ಕೆ.ಕರ್ಕೇರ ಅವರು ಕನ್ನಡಕ್ಕೆ ಅನುವಾದಿಸಿದ ಮತ್ತು ಹುಲುಗಪ್ಪ ಕಟ್ಟಿಮನಿ ನಿರ್ದೇಶನದ ಕಾಲಚಕ್ರ ನಾಟಕವು ಕಲಬುರಗಿ ನಾಟಕೋತ್ಸವ ಅಂಗವಾಗಿ ಇಲ್ಲಿನ ಡಾ.ಎಸ್.ಎಂ.ಪಂಡಿತ್ ರಂಗಮಂದಿರದಲ್ಲಿ ಪ್ರದರ್ಶನವಾಗಿದ್ದು, ವೃದ್ಧರ ಸಂಧ್ಯಾಕಾಲದ ಕಷ್ಟದ ಬದುಕು ಅನಾವರಣಗೊಳ್ಳುವ ಮೂಲಕ ಮನೆ–ಮನೆಯ ಕಥೆಯನ್ನು ಪ್ರತಿಬಿಂಬಿಸಿತು.


ವೃದ್ಧ ದಂಪತಿಗಳು ಹಾಗೂ ಅವರ ಇಬ್ಬರ ಗಂಡು ಮಕ್ಕಳು. ಕಾಯಿಲೆಯಿಂದ ನರಳುತ್ತಿರುವ ತಾಯಿ, ತಂದೆಯರನ್ನ ಮಕ್ಕಳು ನಿರ್ಲಕ್ಷಿಸುತ್ತಾರೆ. ಇದನ್ನರಿತ ವೃದ್ಧ ತಂದೆ ಪತ್ರಿಕೆಯಲ್ಲಿ ಒಂದು ಪ್ರಕಟಣೆ ಕೊಡುತ್ತಾನೆ. ಯಾರಿಗೆ ಮಕ್ಕಳಿಲ್ಲವೊ ಅಂತವರು ಮಕ್ಕಳನ್ನು ದತ್ತು ತೆಗೆದು ಕೊಳ್ಳುತ್ತಾರೆ. ಹಾಗೆಯೇ ಯಾರಿಗೆ ತಂದೆ–ತಾಯಿ ಇಲ್ಲವೊ ಅಥವಾ ಅಜ್ಜ–ಅಜ್ಜಿ ಇಲ್ಲವೊ ಅಂತವರು ಯಾಕೆ ಈ ಮುದುಕರನ್ನು ದತ್ತು ತೆಗೆದುಕೊಳ್ಳಬಾರದು ? ಇಚ್ಚಿಸುವುದಾದರೆ. 70–75 ವಯಸ್ಸಿನ ಇಬ್ಬರು ವೃದ್ಧ ದಂಪತಿಗಳಿದ್ದಾರೆ. ಅವರನ್ನು ಕರೆದು ಕೊಂಡು ಹೋಗಿ ಎಂದು ಪತ್ರಿಕೆಯಲ್ಲಿ ಜಾಹೀರಾತು ಕೊಡುತ್ತಾರೆ. ಇದನ್ನರಿತ ಮಕ್ಕಳಿಬ್ಬರು ವಯಸ್ಸಾದ ತಮ್ಮ ತಂದೆ–ತಾಯಿಯನ್ನು ವೃದ್ಧಾಶ್ರಮಕ್ಕೆ ಸೇರಿಸುತ್ತಾರೆ. ಇದೇ ಹೊತ್ತಿಗೆ ಜಾಹೀರಾತು ಪ್ರಕಟಣೆಯನ್ನು ಓದಿದ ಒಬ್ಬ ಯುವಕ ವೃದ್ದರನ್ನು ತನ್ನ ಮನೆಗೆ ಕರೆದುಕೊಂಡು ಹೋಗುತ್ತಾನೆ. ಹೋಗುವ ಮುನ್ನ ಮುದುಕ ತಂದೆ ತನ್ನ ಮಕ್ಕಳಿಗೆ ಹೇಳುತ್ತಾನೆ ನಿನ್ನೆ ನೀವು ನಮ್ಮ ಮೇಲೆ ಅವಲಂಬಿತರಾಗಿದ್ರಿ, ಇಂದು ನಾವು ನಿಮ್ಮ ಮೇಲೆ ಅವಲಂಬಿತರಾಗಿದ್ದೇವೆ ಇದು ಒಂದು ಕಾಲಚಕ್ರ ಎಂದು ಹೇಳುವ ಮನಕಲಕುವ ದೃಶ್ಯ ನೋಡುಗರ ಕಣ್ಣಲ್ಲಿ ನೀರು ತರಿಸಿದವು.

ಕಾಲಚಕ್ರ ನಾಟಕವು ಮನೆ ಮನೆಯ ಕಥೆಯಾಗಿದೆ. ಸರ್ವಕಾಲಕ್ಕೂ ಸಲ್ಲುವ ನಾಟಕವಾಗಿದೆ. ಆರ್ಥಿಕ ಅಸುರಕ್ಷತೆ, ಮಕ್ಕಳ ಮೇಲಿನ ಅವಲಂಬನೆ, ಭವಿಷ್ಯದ ಮೇಲಿನ ಅನಿಶ್ಚಿತತೆಗಳು, ಕುಟುಂಬ ಸದಸ್ಯರ ನಿರ್ಲಕ್ಷ್ಯ ಸಾಮಾಜಿಕ ಸಂಪರ್ಕಗಳ ಕೊರತೆಯಿಂದ ಒಂಟಿತನದ ವೇದನೆ ಇವು ಎಲ್ಲವನ್ನು ಒಳಗೊಂಡ ನಾಟಕವೆ ಕಾಲಚಕ್ರವಾಗಿದೆ. ನಾಟಕದಲ್ಲಿ ವೃದ್ಧಾಪ್ಯದ ಸೂಕ್ಷ್ಮ ಸಂವೇದನೆಗಳು ಬಹಳ ಸೊಗಸಾಗಿ ಮೂಡಿಬಂದಿದೆ. ಕಲಬುರಗಿ ರಂಗಾಯಣ ರೆಪರ್ಟರಿ ಕಲಾವಿದರು ಅಷ್ಟೇ ಮನೋಜ್ಞವಾಗಿ ಅಭಿನಯಿಸಿದ್ದಾರೆ. ಒಟ್ಟಾರೆ ನಾಟಕ ಪ್ರೇಕ್ಷಕರ ಮನಕಲಕಿತ್ತು.

ಶಾಸಕ ಎಂ.ವೈ.ಪಾಟೀಲ, ಕಲಬುರಗಿ ರಂಗಾಯಣ ನಿರ್ದೇಶಕಿ ಡಾ.ಸುಜಾತಾ ಜಂಗಮಶೆಟ್ಟಿ, ಆಡಳಿತಾಧಿಕಾರಿ ಸಿದ್ರಾಮ ಶಿಂಧೆ ಸೇರಿದಂತೆ ಹಲವರು ನಾಟಕ ವೀಕ್ಷಿಸಿದರು.

ಇಂದು ಸಂಜೆ ಇದೇ ರಂಗಮಂಚದಲ್ಲಿ ಲಕ್ಷ್ಮಣ್ ಕೆ.ಪಿ. ನಿರ್ದೇಶನದ ಬಾಬ್ ಮಾರ್ಲಿ ಫ್ರಮ್ ಕೋಡಿಹಳ್ಳಿ ನಾಟಕ ಪ್ರದರ್ಶನವಾಗಲಿದೆ

# ಪಾದಯಾತ್ರಿಕರಿಗೆ ಗ್ರಾಮಸ್ಥರಿಂದ ಭವ್ಯ ಸ್ವಾಗತ




**ಕಲಬುರಗಿ,ಫೆ 28:** ಜಿಲ್ಲೆಯ ಜೇವರಗಿ ತಾಲೂಕಿನ ಹಿಪ್ಪರಗಾ ಎಸ್.ಎನ್.ಗ್ರಾಮದ ಗೌರಿ ಶಂಕರ ಅನುಭವ ಮಂಟಪದಲ್ಲಿ ಜ್ಯೋತಿರ್ಲಿಂಗ ಪಾದಯಾತ್ರಿಕರು ಹಾಗೂ 55 ಕೆ.ಜಿ ಭಾರದ ಜೋಳದ ಚೀಲ ಹೊತ್ತು ಅಯೋಧ್ಯಾ ಪ್ರಭು ಶ್ರೀರಾಮಚಂದ್ರನ ದರ್ಶನ ಪಡೆದ ಸಿಂದಗಿ ತಾಲೂಕಿನ ಬಳಗಾನೂರ ಗ್ರಾಮದ ಕೇದಾರನಾಥ ಕುಂಬಾರ ಹಾಗೂ ತಂಡದ ಪಾದಯಾತ್ರಿಕರಿಗೆ ಗ್ರಾಮಸ್ಥರು ಸನ್ಮಾನಿಸಿ ಗೌರವಿಸಿದರು. ಮಡಿವಾಳಪ್ಪಗೌಡ ಮಾಲಿ ಪಾಟೀಲ, ಆಲಮೇಲ ತಾಲೂಕಿನ ಮೊರಟಗಿ ಗ್ರಾಮದ ಮಹಾದೇವಪ್ಪ ಸಿಂದಗಿ ಯಡ್ರಾಮಿ ತಾಲೂಕಿನ ವಸ್ತಾರಿ ಗ್ರಾಮದ ಶಾಂತಪ್ಪ ಯಳಸಂಗಿ, ಶಹಾಪುರ ತಾಲೂಕಿನ ಶಿರವಾಳ ಗ್ರಾಮದ ಭೀಮರಾಯ ಗುಳೇದ ಹಾಗೂ ದಿಗ್ಗಿ ಗ್ರಾಮದ ಸಂಗನ ಬಸವ ವಡೆಯರ,ವಾಹನ ಚಾಲಕರಾದ ಬಸವರಾಜ ಸಿದ್ದಗೊಂಡ ಕುರನಳ್ಳಿ ಹಾಗೂ ಜೋಳದ ಚೀಲ ಹೊತ್ತು ಅಯೋಧ್ಯಾ ಪ್ರಭು ಶ್ರೀರಾಮಚಂದ್ರನ ದರ್ಶನ ಪಡೆದ ಸಿಂದಗಿ ತಾಲೂಕಿನ ಬಳಗಾನೂರ ಗ್ರಾಮದ ಕೇದಾರನಾಥ ಕುಂಬಾರ, ವಿವೇಕಾನಂದ ಕುಮಾರ, ಅರವಿಂದ ಪುರದಾಳ, ನೂರಸಾಬ ನದಾಫ್ ಅವರನ್ನು ಗ್ರಾಮದ ಬಸ್ ನಿಲ್ದಾಣದಿಂದ ಭಜನೆ ಮೂಲಕ ಗೌರಿ ಶಂಕರ ದೇವಸ್ಥಾನಕ್ಕೆ ಬರಮಾಡಿ ಕೊಂಡರು. ವಿಭೂತಿಹಳ್ಳಿ ಗೌರಿ ಶಂಕರ ಪುಣ್ಯಾಶ್ರಮದ ಮಹಾಂತ ಸ್ವಾಮಿಗಳು ಸಾನಿಧ್ಯದಲ್ಲಿ ಅಯ್ಯಣ್ಣ ಶಾಸ್ತ್ರೀ ಹಿರೇಮಠ ವಸ್ತಾರಿ,ಸಿದ್ಧಬಸವ ಹಿರೇಮಠ ವಸ್ತಾರಿ ಸಮುಖದಲ್ಲಿ ಸನ್ಮಾನ ಕಾರ್ಯಕ್ರಮ ಜರುಗಿತು.ಗ್ರಾಮದ ಹಿರಿಯರಾದ ಮಲ್ಲಿಕಾರ್ಜುನ ಯರಗಲ್ , ಸಿದ್ದಣ್ಣ ಗೌಡ ನಾಗರವತ್ತ ಹರವಾಳ, ಗುರಲಿಂಗಪ್ಪ ಗೌಡ ಆಲೂರ, ರಾಮಲು ಗುತ್ತೇದಾರ ಜೇವರ್ಗಿ, ಶರಣಯ್ಯ ಸ್ವಾಮಿ ಚಿಕ್ಕ ಮಠ ವಸ್ತಾರಿ,ಶಿವಾನಂದ ಶಾಸ್ತ್ರೀ ಕಲ್ಲಹಂಗರಗಾ, ಡಾ. ನಾಗರಾಜ ಚನಗೊಂಡ, ಮಲ್ಲಿಕಾರ್ಜುನ ಯರಗಲ್, ಮಹೇಶ ಕಶೆಟ್ಟಿ,ಗಂಗಾಧರ ಬಡಗೇರ, ಸಂಗನಗೌಡ ಪಾಟೀಲ, ಸಿದ್ದು ಅವಟಿ ಅವರು ಸೇರಿದಂತೆ ಹಲವರು ಉಪಸ್ಥಿತರಿದ್ದರೆಂದು ಗುರುರಾಜ ಪಟ್ಟಣಶೆಟ್ಟಿ ತಿಳಿಸಿದ್ದಾರೆ

# "ಪರೀಕ್ಷೆಗಳ ಎಂಬ ಭಯದ ಭೂತದಿಂದ ದೂರವಿರಿ"

ಆತ್ಮೀಯ ಪಾಲಕರೇ,ಸ್ನೇಹಿತರೇ,ಶಿಕ್ಷಕರೇ, ಇದು ಫೆಬ್ರುವರಿ ಕೊನೆಯ ಮತ್ತು ಮಾರ್ಚ ತಿಂಗಳ ಆರಂಭ ಜೊತೆಗೆ ಮಕ್ಕಳ ಪರೀಕ್ಷೆಗಳ ಸಮಯ . ಮೊದಲಿಗೆ ದ್ವಿತೀಯ ಪಿಯುಸಿ ನಂತರ ಹತ್ತನೇ ತರಗತಿಯ ಪರೀಕ್ಷೆಗಳು ಜರಗುತ್ತವೆ ,ಮನೆಯಲ್ಲಿ ಪಾಲಕರು ಶಾಲಾ ಕಾಲೇಜುಗಳಲ್ಲಿ ಉಪನ್ಯಾಸಕರು ,ಶಿಕ್ಷಕರು ವಿದ್ಯಾರ್ಥಿಗಳ ಮೇಲೆ ಒತ್ತಡವನ್ನು ಮಾಡಬೇಡಿ ಈ ಪರೀಕ್ಷೆಯೆಂಬ ಭಯದಿಂದ ವಿಧ್ಯಾರ್ಥಿಗಳು ಹೊರಬರಲು ಅವರಿಗೆ ನಿರ್ದಿಷ್ಟವಾಗಿ ಸಮಯವನ್ನು ನೀಡಿ ಜೊತೆಗೆ ಕೆಲವೊಂದು ಹಿತನುಡಿಗಳನ್ನು ಹೇಳಿ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು, ಹೆಚ್ಚಿಸುವ ಕೆಲಸ ಮಾಡಬೇಕೆ ವಿನಹ ಅವರ ಆತ್ಮಸ್ಥೈರ್ಯ, ಮನೋಬಲವನ್ನು ಕುಗ್ಗಿಸುವ ರೀತಿಯಲ್ಲಿ , ಕಡ್ಡಾಯವಾಗಿ ರಾಜ್ಯಕ್ಕೆ ಪ್ರಥಮ, ಜಿಲ್ಲೆಗೆ ಪ್ರಥಮ ,ತಾಲೂಕಿಗೆ ಪ್ರಥಮ ,ಕಾಲೇಜಿಗೆ ಪ್ರಥಮ, ಇಂಜನಿಯರಿಂಗ್ ,ಮೆಡಿಕಲ್ ಮುಂತಾದ ವಿಭಾಗಗಳಲ್ಲಿ ಸೀಟಗಳನ್ನು ಪಡೆಯಲೇಬೇಕು ಎಂಬ ಒತ್ತಡವನ್ನು ಹಾಕಬೇಡಿ, ಪರೀಕ್ಷಾ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಆದಷ್ಟು ಕೆಳಗೆ ನೀಡಿರುವ ಸಲಹೆಗಳನ್ನು ನೀಡಿ ಪ್ರೋತ್ಸಾಹಿಸಿ

**1. ಸಮಯ ನಿರ್ವಹಣೆ:** ಪರೀಕ್ಷೆಗೆ ಸರಿಯಾದ ಸಮಯದಲ್ಲಿ ಅಧ್ಯಯನ ಮಾಡಲು ಪ್ರಾರಂಭಿಸಿ. ಸಮಯವನ್ನು ಸರಿಯಾಗಿ ನಿರ್ವಹಿಸಿ ಮತ್ತು ಅಧ್ಯಯನಕ್ಕೆ ಸಾಕಷ್ಟು ಸಮಯವನ್ನು ನೀಡಿ. ಇದರಿಂದ ನೀವು ಅಧ್ಯಯನ ಮಾಡಬೇಕಾದ ಎಲ್ಲಾ ವಿಷಯಗಳನ್ನು ಕಲಿಯಲು ಸಾಧ್ಯವಾಗುತ್ತದೆ ಮತ್ತು ನಿಮಗೆ ಒತ್ತಡ ಕಡಿಮೆಯಾಗುತ್ತದೆ.

**2. ಅಧ್ಯಯನ ಯೋಜನೆ:** ಅಧ್ಯಯನ ಯೋಜನೆಯನ್ನು ಮಾಡಿ ಮತ್ತು ಅದನ್ನು ಅನುಸರಿಸಿ. ಯಾವ ವಿಷಯಗಳನ್ನು ಅಧ್ಯಯನ ಮಾಡಬೇಕು ಮತ್ತು ಯಾವ ಸಮಯದಲ್ಲಿ ಅಧ್ಯಯನ ಮಾಡಬೇಕು ಎಂಬುದನ್ನು ನಿರ್ಧರಿಸಿ. ಇದರಿಂದ ನೀವು ಅಧ್ಯಯನ ಮಾಡುವಾಗ ಗೊಂದಲಕ್ಕೀಡಾಗುವುದಿಲ್ಲ ಮತ್ತು



ನಿಮಗೆ ಏನು ಮಾಡಬೇಕು ಎಂಬುದು ಸ್ಪಷ್ಟವಾಗಿರುತ್ತದೆ.

**3. ಸ್ವಯಂ-ಅನುಶಾಸನ:** ಸ್ವಯಂ-ಅನುಶಾಸನವನ್ನು ಅಭ್ಯಾಸ ಮಾಡಿ. ತನ್ನನ್ನು ತಾನು ಪ್ರೇರೇಪಿಸಿಕೊಳ್ಳಿ ಮತ್ತು ಅಧ್ಯಯನಕ್ಕೆ ಪ್ರೋತ್ಸಾಹಿಸಿ. ಇದರಿಂದ ನೀವು ಅಧ್ಯಯನ ಮಾಡಲು ಪ್ರೇರಣೆ ಪಡೆಯುತ್ತೀರಿ ಮತ್ತು ನಿಮಗೆ ಒತ್ತಡ ಕಡಿಮೆಯಾಗುತ್ತದೆ.

**4. ಸಹಾಯ ಪಡೆಯುವುದು:** ಸಹಾಯ ಪಡೆಯಲು ಹಿಂಜರಿಯಬೇಡಿ. ಶಿಕ್ಷಕರು, ಪೋಷಕರು, ಅಥವಾ ಸಹಪಾಠಿಗಳಿಂದ ಸಹಾಯ ಪಡೆಯಿರಿ. ಇದರಿಂದ ನೀವು ಅಧ್ಯಯನ ಮಾಡುವಾಗ ಎದುರಾಗುವ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುತ್ತದೆ ಮತ್ತು ನಿಮಗೆ ಒತ್ತಡ ಕಡಿಮೆಯಾಗುತ್ತದೆ.

**5. ಆರೋಗ್ಯಕರ ಜೀವನಶೈಲಿ:** ಆರೋಗ್ಯಕರ ಜೀವನಶೈಲಿಯನ್ನು ಅನುಸರಿಸಿ. ಸರಿಯಾದ ಆಹಾರವನ್ನು ಸೇವಿಸಿ, ಸಾಕಷ್ಟು ನಿದ್ರೆ ಮಾಡಿ, ಮತ್ತು ವ್ಯಾಯಾಮ ಮಾಡಿ. ಇದರಿಂದ ನೀವು ಅಧ್ಯಯನ ಮಾಡಲು ಶಕ್ತಿ ಮತ್ತು ಸ್ಪಷ್ಟತೆ ಪಡೆಯುತ್ತೀರಿ ಮತ್ತು ನಿಮಗೆ ಒತ್ತಡ ಕಡಿಮೆಯಾಗುತ್ತದೆ.

**6. ಧ್ಯಾನ ಮತ್ತು ವಿಶ್ರಾಂತಿ:** ಧ್ಯಾನ ಮತ್ತು ವಿಶ್ರಾಂತಿಯನ್ನು ಅಭ್ಯಾಸ ಮಾಡಿ. ಮನಸ್ಸನ್ನು ಶಾಂತಗೊಳಿಸಿ ಮತ್ತು ಒತ್ತಡವನ್ನು ಕಡಿಮೆ ಮಾಡಿ. ಇದರಿಂದ ನೀವು ಅಧ್ಯಯನ ಮಾಡಲು ಸ್ಪಷ್ಟತೆ ಮತ್ತು ಗಮನ ಪಡೆಯುತ್ತೀರಿ ಮತ್ತು ನಿಮಗೆ ಒತ್ತಡ ಕಡಿಮೆಯಾಗುತ್ತದೆ.

ಒಂದು ಶಾಲೆಯ ರಾಜ್ ಒಬ್ಬ 12ನೇ ತರಗತಿಯ ವಿದ್ಯಾರ್ಥಿ. ಅವನು ಪರೀಕ್ಷೆಯ ಒತ್ತಡದಿಂದ ಬಳಲುತ್ತಿದ್ದಾನೆ. ಅವನು ಅಧ್ಯಯನ ಮಾಡಲು ಪ್ರಾರಂಭಿಸುತ್ತಾನೆ, ಆದರೆ ಅವನಿಗೆ ಏನೂ ನೆನಪಿರುವುದಿಲ್ಲ. ಅವನು ಆತಂಕ ಮತ್ತು ಒತ್ತಡವನ್ನು ಅನುಭವಿಸುತ್ತಾನೆ.

ಒಂದು ದಿನ, ಅವನು ತನ್ನ ಶಿಕ್ಷಕರೊಂದಿಗೆ ಮಾತನಾಡುತ್ತಾನೆ. ಶಿಕ್ಷಕರು ಅವನಿಗೆ ಸಮಯ ನಿರ್ವಹಣೆ ಮತ್ತು ಅಧ್ಯಯನ ಯೋಜನೆಯ ಬಗ್ಗೆ ಸಲಹೆ ನೀಡುತ್ತಾರೆ. ರಾಜ್ ಶಿಕ್ಷಕರ ಸಲಹೆಯನ್ನು ಅನುಸರಿಸುತ್ತಾನೆ ಮತ್ತು ಅಧ್ಯಯನ ಮಾಡಲು ಪ್ರಾರಂಭಿಸುತ್ತಾನೆ.

ಅವನು ಅಧ್ಯಯನ ಮಾಡುವಾಗ, ಅವನು ಸ್ವಯಂ-ಅನುಶಾಸನವನ್ನು ಅಭ್ಯಾಸ ಮಾಡುತ್ತಾನೆ. ಅವನು ತನಗೆ ತಾನೇ ಹೇಳುತ್ತಾನೆ, "ನಾನು ಇದನ್ನು ಮಾಡಬಲ್ಲೆ. ನಾನು ಉತ್ತಮವಾಗಿ ಕಾರ್ಯನಿರ್ವಹಿಸುತ್ತೇನೆ." ಅವನು ಸಹಾಯ ಪಡೆಯಲು ಹಿಂಜರಿಯಬೇಡಿ. ಅವನು ತನ್ನ ಸಹಪಾಠಿಗಳಿಂದ ಸಹಾಯ ಪಡೆಯುತ್ತಾನೆ.

ಪರೀಕ್ಷೆಯ ದಿನ, ರಾಜ್ ಶಾಂತವಾಗಿ ಮತ್ತು ವಿಶ್ವಾಸದಿಂದ ಇರುತ್ತಾನೆ. ಅವನು ಉತ್ತಮವಾಗಿ ಕಾರ್ಯನಿರ್ವಹಿಸುತ್ತಾನೆ ಮತ್ತು ಉತ್ತಮ ಅಂಕಗಳನ್ನು ಪಡೆಯುತ್ತಾನೆ.

ರಾಜ್‌ನಂತೆ ವಿಧ್ಯಾರ್ಥಿಗಳಿಗೆ ಪರೀಕ್ಷೆಯ ಒತ್ತಡವನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ತೋರಿಸುತ್ತದೆ. ಅವನು ಸಮಯ ನಿರ್ವಹಣೆ, ಅಧ್ಯಯನ ಯೋಜನೆ, ಸ್ವಯಂ-ಅನುಶಾಸನ, ಸಹಾಯ ಪಡೆಯುವುದು, ಆರೋಗ್ಯಕರ ಜೀವನಶೈಲಿ, ಮತ್ತು ಧ್ಯಾನ ಮತ್ತು ವಿಶ್ರಾಂತವನ್ನು ಅಭ್ಯಾಸ ಮಾಡುವ ಮೂಲಕ ಪರೀಕ್ಷೆಯ ಒತ್ತಡವನ್ನು ನಿಭಾಯಿಸುತ್ತಾನೆ.

ಪರೀಕ್ಷೆಯು ಒತ್ತಡವನ್ನು ನಿಭಾಯಿಸಲು ಹಲವಾರು ಮಾರ್ಗಗಳಿವೆ. ವಿಧ್ಯಾರ್ಥಿಗಳು ಸಮಯ ನಿರ್ವಹಣೆ, ಅಧ್ಯಯನ ಯೋಜನೆ, ಸ್ವಯಂ-ಅನುಶಾಸನ, ಸಹಾಯ ಪಡೆಯುವುದು, ಆರೋಗ್ಯಕರ ಜೀವನಶೈಲಿ, ಮತ್ತು ಧ್ಯಾನ ಮತ್ತು ವಿಶ್ರಾಂತಿಯನ್ನು ಅಭ್ಯಾಸ ಮಾಡುವ ಮೂಲಕ ಪರೀಕ್ಷೆಯ ಒತ್ತಡವನ್ನು ನಿಭಾಯಿಸಬಹುದು.

ಪರೀಕ್ಷೆಯ ಸಂದರ್ಭದಲ್ಲಿ ಸಮಯಕ್ಕೆ ಸರಿಯಾಗಿ ಪಾಲಕರು ತಮ್ಮ ಮಕ್ಕಳನ್ನು ಪಕ್ಷ ಕೇಂದ್ರಕ್ಕೆ ಸರಿಯಾದ ಸಮಯಕ್ಕೆ ತಲುಪಿಸಿ ಬಿಸಿಲಿನ ಪ್ರಮಾಣ ಹೆಚ್ಚಿರುವುದರಿಂದ ಒಂದು ಚಿಕ್ಕ ಬಾಟಲಿನಲ್ಲಿ ನೀರಿನ ವ್ಯವಸ್ಥೆ, ಕರವಸ್ತ್ರ ಪೆನ್ನುಗಳು ,ಪ್ರವೇಶ ಪತ್ರ, ಜಾಮೆಟ್ರಿ ಬಾಕ್ಸ್, ಮುಂತಾದವುಗಳ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾನೆ/ಳೆ ಎಂಬುದನ್ನ ಗಮನಿಸಿ ಪರೀಕ್ಷಾ ಕೊಠಡಿಯ ಒಳಗಡೆ ಹೋಗುವ ಮುಂಚೆ ಒಮ್ಮೆ ಎಲ್ಲವೂ ಪರೀಕ್ಷಿಸಿ ಬೆನ್ನು ತಟ್ಟಿ ಏನು ಆಗುವುದಿಲ್ಲ ನನಗೆ ಗೊತ್ತು ನೀನು ಉತ್ತಮ ಅಂಕಗಳನ್ನು ಪಡೆಯುತ್ತೀಯ ನಿನಗೆ ಏನು ಗೊತ್ತಿದೆಯೋ ಆ ಎಲ್ಲಾ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸು . ಸಮಯದ ಕಡೆ ಗಮನವನ್ನು ಕೊಡು ಎಂದು ಸ್ನೇಹಿತನಂತೆ ಅವರನ್ನು ಪ್ರೋತ್ಸಾಹಿಸಿ ಬೆನ್ನು ತಟ್ಟಿ ಪರೀಕ್ಷೆಗೆ ಕಳುಹಿಸಿ.

**ಡಾ. ರವಿ ರಾಜು ಡಿ**
**ಸಹಾಯಕ ಪ್ರಾಧ್ಯಾಪಕರು**
**ಎಸ್ ಆರ್ ಕೆ ಶಿಕ್ಷಣ ಮಹಾವಿದ್ಯಾಲಯ**
**ರಾಯಚೂರು.**



# ಗೃಹಲಕ್ಷ್ಮಿ ಯೋಜನೆಯ 26ನೇ ಕಂತಿನ ಹಣ ಫಲಾನುಭವಿಗಳ ಖಾತೆಗೆ ಜಮೆ




**ಬೆಂಗಳೂರು,ಫೆ.28–** ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಗೃಹಲಕ್ಷ್ಮಿ ಯೋಜನೆಯ 26ನೇ ಕಂತಿನ ತಲಾ 2000 ಹಣ ಫಲಾನುಭವಿಗಳ ಖಾತೆಗೆ ಯಶಸ್ವಿಯಾಗಿ ಜಮೆಯಾಗಿದ್ದು, ಈವರೆಗೆ ಪ್ರತಿ ಮನೆಯ ಯಜಮಾನಿಗೆ ಒಟ್ಟು 52,000 ರೂ. ಪಾವತಿಯಾದಂತಾಗಿದೆ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ರಾಜ್ಯ ಉಪಾಧ್ಯಕ್ಷ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

ಕಳೆದ ಎರಡೂವರೆ ವರ್ಷಗಳಲ್ಲಿ ರಾಜ್ಯ ಸರ್ಕಾರವು ತನ್ನ ಐದೂ ಗ್ಯಾರಂಟಿ ಯೋಜನೆಗಳ ಮೂಲಕ ಬರೋಬ್ಬರಿ 1 ಲಕ್ಷದ 20 ಸಾವಿರದ 433 ಕೋಟಿ ರೂ.ಗೂ ಅಧಿಕ ಹಣವನ್ನು ನೇರವಾಗಿ ಮತ್ತು ಪಾರದರ್ಶಕವಾಗಿ ಜನರ ಖಾತೆಗೆ ವರ್ಗಾಯಿಸುವ ಮೂಲಕ ನುಡಿದಂತೆ ನಡೆದಿದೆ ಎಂದರು.

ಗೃಹಲಕ್ಷ್ಮಿ ಯೋಜನೆಯಡಿ ರಾಜ್ಯದಲ್ಲಿ ಒಟ್ಟು 1,24,10,629 ಮಹಿಳೆಯರು ನೋಂದಣಿಯಾಗಿದ್ದಾರೆ. ಈ ಯೋಜನೆಗಾಗಿ ಸರ್ಕಾರವು ಇದುವರೆಗೆ ಒಟ್ಟು 62,345.34 ಕೋಟಿ ರೂ. ವೆಚ್ಚ ಮಾಡಿದೆ. 26 ಕಂತುಗಳ ಹಣ ಯಶಸ್ವಿಯಾಗಿ ಪಾವತಿಯಾಗಿದ್ದು, 27ನೇ ಕಂತಿನ ಅನುದಾನವನ್ನು ಸಹ ಈಗಾಗಲೇ ಖಜಾನೆಯಿಂದ ಬಿಡುಗಡೆಗೊಳಿಸಲಾಗಿದೆ.

ಶೀಘ್ರದಲ್ಲೆ 31 ಜಿಲ್ಲೆಗಳ ಫಲಾನುಭವಿಗಳಿಗೆ ಇದು ತಲುಪಲಿದೆ ಎಂದು ಅವರು ವಿವರಿಸಿದ್ದಾರೆ.

ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ಮನೆಯ ಯಜಮಾನಿಗೆ ತಿಂಗಳಿಗೆ 2000 ರೂ.ಗಳಂತೆ ಒಬ್ಬ ಮಹಿಳೆ ಗೆ ಒಟ್ಟು 52 ಸಾವಿರ ಹಣವನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ತಲುಪಿಸಿದೆ. ಗೃಹಲಕ್ಷ್ಮಿ ಯೋಜನೆ ಕುಟುಂಬದ ಆರ್ಥಿಕ ನಿರ್ಧಾರಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಿದೆ.

ಗ್ಯಾರಂಟಿ ಯೋಜನೆಗಳು ಕೇವಲ ಹಣದ ಸಹಾಯವಲ್ಲ, ಗೌರವದ ಭರವಸೆ. ಪಕ್ಷಬೇಧವಿಲ್ಲದೆ ಎಲ್ಲರಿಗೂ ಗ್ಯಾರಂಟಿ ಯೋಜನೆಗಳನ್ನು ತಲುಪಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಗೃಹಜ್ಯೋತಿ ಯೋಜನೆಯಡಿ ರಾಜ್ಯದ 1,65,65,000 ಮನೆಗಳಿಗೆ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಒದಗಿಸಲಾಗುತ್ತಿದ್ದು, ಈವರೆಗೆ ಒಟ್ಟು 22,839 ಕೋಟಿ ವೆಚ್ಚವಾಗಿದೆ, ಶಕ್ತಿ ಯೋಜನೆಯ ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯ ಕಲ್ಪಿಸಲಾಗಿದ್ದು, ಈವರೆಗೆ 679.20 ಕೋಟಿ ಉಚಿತ ಟಿಕೆಟ್‌ಗಳನ್ನು ವಿತರಿಸಲಾಗಿದೆ.

ಅನ್ನಭಾಗ್ಯ ಯೋಜನೆಯಡಿ ಬಡ ಕುಟುಂಬಗಳಿಗೆ ಉಚಿತ ಅಕ್ಕಿ/ಹಣ ವಿತರಿಸುವ ಈ ಯೋಜನೆಗೆ ಒಟ್ಟು 16,000 ಕೋಟಿ ವ್ಯಯಿಸಲಾಗಿದೆ. ಯುವನಿಧಿ ಯೋಜನೆಯಡಿ 3,08,267 ನಿರುದ್ಯೋ?ಗಿ ಪದವೀಧರರಿಗೆ ಪ್ರತಿ ತಿಂಗಳು ಆರ್ಥಿಕ ನೆರವು ನೀಡಲಾಗುತ್ತಿದ್ದು, ಇದುವರೆಗೆ ಒಟ್ಟು 915 ಕೋಟಿ ಹಣವನ್ನು ನೇರವಾಗಿ ಅವರ ಖಾತೆಗೆ ವರ್ಗಾಯಿಸಲಾಗಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# “ತಾಲೂಕಾ ಮಟ್ಟದ ಉತ್ತಮ ಸೇವಾರತ್ನ ಪ್ರಶಸ್ತಿ” ಪುರಸ್ಕೃತರಿಗೆ ಸನ್ಮಾನ



**ಕಲಬುರಗಿ,ಫೆ.28:**ಜೇವರ್ಗಿ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, “ತಾಲೂಕಾ ಮಟ್ಟದ ಉತ್ತಮ ಸೇವಾರತ್ನ ಪ್ರಶಸ್ತಿ” ಪುರಸ್ಕೃತರಿಗೆ ಹಾಗೂ ಜಿಲ್ಲಾ ಮಟ್ಟದ ಕ್ರೀಡಾ ವಿಜೇತ ತರಬೇತಿದಾರರಿಗೆ ಜೇವರ್ಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಗುರುವಾರ ಅಭಿನಂದನಾ ಸಮಾರಂಭವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಕೆ.ಜಿ.ಟಿ.ಟಿ.ಐ. ನಿರ್ದೇಶಕರಾದ ರಾಜೇಶ ಬಾವಗಿ ಅವರು ಮಾತನಾಡಿ, ಸಂಸ್ಥೆಯ ಅಭಿವೃದ್ಧಿಗೆ ಸತತವಾಗಿ ಶ್ರಮಪಟ್ಟಿರುವ ಹಾಗೂ ಪ್ರಶಸ್ತಿ ಪುರಸ್ಕೃತ ಉಪನ್ಯಾಸಕರನ್ನು ಅಭಿನಂದನೆ ಸಲ್ಲಿಸಿ, ಜೇವರ್ಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು ಅತ್ಯಾಧುನಿಕ ತಾಂತ್ರಿಕ ಮೂಲಭೂತ ಸೌಕರ್ಯ ಹೊಂದಿದ್ದು, ತರಬೇತಿದಾರರ ದೈಹಿಕ ಸದೃಢತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಏರ್ಪಡಿಸಲಾದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ವಿಜೇತ ತರಬೇತಿದಾರರಿಗೆ ಅಭಿನಂದಿಸಿದರು.

ಜೇವರ್ಗಿ ಪಟ್ಟಣದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ತಾಲೂಕು ಶಾಖೆ ವತಿಯಿಂದ ಹಮ್ಮಿಕೊಳ್ಳಲಾದ “ತಾಲೂಕಾ ಮಟ್ಟದ ಉತ್ತಮ ಸೇವಾ ರತ್ನ ಪ್ರಶಸ್ತಿ” ಪ್ರಧಾನ ಸಮಾರಂಭದಲ್ಲಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಸಿ.ಎಸ್.ಷಡಾಕ್ಷರಿ ಇವರ ಘನ ಉಪಸ್ಥಿತಿಯಲ್ಲಿ ಹಾಗೂ ಜೇವರ್ಗಿ ತಾಲೂಕಿನ ಗಣ್ಯವ್ಯಕ್ತಿಗಳ ಉಪಸ್ಥಿತಿಯಲ್ಲಿ ಜೇವರ್ಗಿ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಿರಿಯ ತರಬೇತಿ ಅಧಿಕಾರಿಗಳಾದ ಸುಧಾಕರ ಎಸ್. ಚಿಕ್ಕಯ್ಯನವರಮಠ (ಟರ್ನರ್ ವೃತ್ತಿಯ) ಹಾಗೂ ಶಿವಶರಣಪ್ಪ (ಕಾರ್ಯಾಗಾರ ಲೆಕ್ಕಚಾರ ಮತ್ತು ವಿಜ್ಞಾನ) ಇವರನ್ನು “ತಾಲೂಕಾ ಮಟ್ಟದ ಉತ್ತಮ ಸೇವಾರತ್ನ ಪ್ರಶಸ್ತಿ” ನೀಡಿ ವಿಶೇಷ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕಲಬುರಗಿ (ಪುರುಷ) ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು/ನೋಡಲ್ ಅಧಿಕಾರಿಗಳಾದ ಮುರಳೀಧರ ರತ್ನಗಿರಿ, ಶಹಾಬಾದ ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆಯ ಪ್ರಾಚಾರ್ಯ ಅರುಣಕುಮಾರ, ಸಂಸ್ಥೆಯ ಐ.ಎಂ.ಸಿ.ಯ ಉದ್ದಿಮೆ ಸದಸ್ಯರುಗಳಾದ ಅರುಣಕುಮಾರ ಲೋಯಾ ಹಾಗೂ ಶಿವಶಂಕರಯ್ಯ ಮಠಪತಿ ಪ್ರಶಸ್ತಿ ಪುರಸ್ಕೃತ ಉಪನ್ಯಾಸಕರುಗಳಿಗೆ ಹಾಗೂ ಜಿಲ್ಲಾ ಮಟ್ಟದ ಕ್ರೀಡಾ ವಿಜೇತ ತರಬೇತಿದಾರರಿಗೆ ಅಭಿನಂದಿಸಿದರು.ಸಂಸ್ಥೆಯ ಪ್ರಾಚಾರ್ಯರು ಹಾಗೂ ಕಲಬುರಗಿ ವಿಭಾಗೀಯ ಕಚೇರಿಯ ಉಪನಿರ್ದೇಶಕ ಡಾ.ರುಬಿನಾ ಪರ್ವಿನ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು. ಬಸನಗೌಡ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಶಿವಶರಣಪ್ಪ ಸ್ವಾಗತಿಸಿದರು. ಸುಧಾಕರ ಎಸ್. ಚಿಕ್ಕಯ್ಯನವಮಠ ವಂದಿಸಿದರು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಎಲ್ಲಾ ಸಿಬ್ಬಂದಿಗಳು ಹಾಗೂ ತರಬೇತಿದಾರರು ಭಾಗವಹಿಸಿದ್ದರು.

# ಇರಾನ್ ತೊರೆಯಲು ಪ್ರಜೆಗಳಿಗೆ ಹಲವು ದೇಶಗಳು ಸೂಚನೆ

**ವಾಷಿಂಗ್ಟನ್, ಫೆ.28–** ಇರಾನ್‌ನ ಪರಮಾಣು ಕಾರ್ಯಕ್ರಮದ ಕುರಿತು ಇತ್ತೀಚಿನ ಮಾತುಕತೆಗಳು ಬಗ್ಗೆ ತೃಪ್ತಿ ಇಲ್ಲ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ ಬೆನ್ನಲ್ಲೇ ಜಗತ್ತಿನ ವಿವಿಧ ದೇಶಗಳು ಇರಾನ್‌ನಲ್ಲಿರುವ ತಮ್ಮ ದೇಶದ ಪ್ರಜೆಗಳು ದೇಶ ತೊರೆಯುವಂತೆ ಸೂಚನೆ ನೀಡಿವೆ.

ಅಮೆರಿಕದಲ್ಲಿರುವ ಇರಾನ್ ನಾಗರಿಕನ್ನೂ ದೇಶ ಬಿಟ್ಟು ಹೋಗುವಂತೆ ಸೂಚಿಸಿದೆ, ಈ ನಡುವೆ ಭಾರತ, ಚೀನಾ, ಕೆನಡಾ, ಫ್ರಾನ್ಸ್, ಇಂಗ್ಲೆಂಡ್ ಸೇರಿದಂತೆ ಹಲವು ದೇಶಗಳು ನಾಗರಿಕರು ಇರಾನ್ ತೊರೆಯುವಂತೆ ಸೂಚಿಸಿವೆ.

ಇರಾನ್ ಜೊತೆ ಮಾತುಕತೆಗಳು ಫಲಪ್ರದವಾಗದ ಹಿನ್ನೆಲೆಯಲ್ಲಿ ಇರಾನ್ ಮೇಲೆ ದಾಳಿ ಮಾಡಬೇಕೆ ಬೇಡವೇ ಎಂದು ಇನ್ನೂ ನಿರ್ಧರಿಸಿಲ್ಲ “ನಮಗೆ ಇರಬೇಕಾದ್ದನ್ನು ಅವರು ನಮಗೆ ನೀಡಲು ಸಿದ್ಧರಿಲ್ಲ ಸದ್ಯದಲ್ಲಿಯೇ ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು ಎಂದು ಅಮೆರಿಕ ಡೊನಲ್ಡ್ ಟ್ರಂಪ್ ಹೇಳಿದ್ದಾರೆ.

ಜಿನೀವಾದಲ್ಲಿ ನಡೆದ ಮಾತುಕತೆಗಳು ಯಾವುದೇ ಫಲಪ್ರದವಾಗದೆ ಮುರಿದುಬಿದ್ದಿವೆ ಈ ಹಿನ್ನೆಲೆಯಲ್ಲಿ ಅಮೆರಿಕ ಮುಂದಿನ ನಿರ್ಧಾರಗಳನ್ನು ಕೈಗೊಳ್ಳುವ ಕುರಿತು ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ಇರಾನ್ ವಿರುದ್ಧ ಮಿಲಿಟರಿ ಬಲವನ್ನು ಬಳಸಲು ಬಯಸುವುದಿಲ್ಲ ಎಂದು ಹೇಳಿರುವ ಅವರು ಕೆಲವೊಮ್ಮೆ ಮಿಲಿಟರಿ ಬಲ ಪ್ರಯೋಗ ಮಾಡಲೂ ಹಿಂಜರಿಯುವುದಿಲ್ಲ ಎಂದಿದ್ದಾರೆ.

ಇರಾನ್ ವಿರುದ್ಧ ಅಮೆರಿಕದ ದಾಳಿಯ ಸಾಧ್ಯತೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ ಹಲವಾರು ದೇಶಗಳು ಈ ಪ್ರದೇಶದ ತಮ್ಮ ನಾಗರಿಕರಿಗೆ ಎಚ್ಚರಿಕೆಗಳನ್ನು ನೀಡಿವೆ.

ಇಂಗ್ಲೆಂಡ್, ಟೆಹ್ರಾನ್‌ನಲ್ಲಿರುವ ತನ್ನ ರಾಯಭಾರ ಕಚೇರಿಯಿಂದ ತಾತ್ಕಾಲಿಕವಾಗಿ ಸಿಬ್ಬಂದಿ ಹಿಂತೆಗೆದುಕೊಂಡಿದೆ. ಇಸ್ರೇಲ್‌ಗೆ ಅಗತ್ಯವಿದ್ದರಷ್ಟೇ ಪ್ರಯಾಣಿಸುವಂತೆ ಮನವಿ ಮಾಡಿದೆ.



ಚೀನಾ, ಭಾರತ ಮತ್ತು ಕೆನಡಾ ಸೇರಿದಂತೆ ದೇಶಗಳು ತಮ್ಮ ನಾಗರಿಕರು ಯುದ್ಧದ ಸಾಧ್ಯತೆಯ ಕಾರಣ ಸಾಧ್ಯವಾದಷ್ಟು ಬೇಗ ಇರಾನ್ ತೊರೆಯುವಂತೆ ಒತ್ತಾಯಿಸಿವೆ. ಇಸ್ರೇಲ್‌ಗೆ ಪ್ರಯಾಣಿಸದಂತೆ ಜರ್ಮನಿ “ತುರ್ತಾಗಿ” ಸಲಹೆ ನೀಡಿದೆ ಆದರೆ ಫ್ರಾನ್ಸ್ ಕೂಡ ತನ್ನ ನಾಗರಿಕಗೆ ಮನವಿ ಮಾಡಿದೆ.

ಏತನ್ಮಧ್ಯೆ, ಅಮೆರಿಕ ಇರಾನ್‌ನಲ್ಲಿರುವ ತನ್ನ ನಾಗರಿಕರನ್ನು “ತಕ್ಷಣ” ಹೊರಹೋಗುವಂತೆ ಸೂಚಿಸಿದೆ, ಇಸ್ರೇಲ್‌ನಲ್ಲಿರುವ ತನ್ನ ರಾಯಭಾರ ಕಚೇರಿ ಕೆಲವು ತುರ್ತು ಸೇವೆಯಲ್ಲದ ಸಿಬ್ಬಂದಿ ಮತ್ತು ಅವರ ಕುಟುಂಬಗಳಿಗೆ ದೇಶವನ್ನು ತೊರೆಯಬಹುದು ಎಂದು ತಿಳಿಸಿದೆ.

2003 ರಲ್ಲಿ ಅಮೆರಿಕ ನೇತೃತ್ವದ ಇರಾಕ್ ಆಕ್ರಮಣದ ನಂತರ ಮಧ್ಯಪ್ರಾಚ್ಯದಲ್ಲಿ ಅಮೆರಿಕದ ಅತಿದೊಡ್ಡ ಮಿಲಿಟರಿ ಜಮಾವಣೆಗೆ ಅವರು ಆದೇಶಿಸಿದ್ದಾರೆ, ಆದರೆ ಇರಾನ್ ಬಲದಿಂದ ದಾಳಿಗೆ ಪ್ರತಿಕ್ರಿಯಿಸುವುದಾಗಿ ಪ್ರತಿಜ್ಞೆ ಮಾಡಿದೆ.

ವಾಷಿಂಗ್ಟನ್ ಮತ್ತು ಅದರ ಮಿತ್ರರಾಷ್ಟ್ರಗಳು ಇರಾನ್ ಪರಮಾಣು ಶಸ್ತ್ರಾಸ್ತ್ರ ಅಭಿವೃದ್ಧಿಪಡಿಸಿದೆ. ಶಸ್ತ್ರಾಸ್ತ್ರ-ದರ್ಜೆಯ ಮಟ್ಟದವರೆಗೆ ಯುರೇನಿಯಂ ಅನ್ನು ಪುಷ್ಟೀಕರಿಸಿದ್ದರೂ ಸಹ ತನ್ನ ಕಾರ್ಯಕ್ರಮ ಶಾಂತಿಯುತ, ನಾಗರಿಕ ಉದ್ದೇಶಗಳಿಗಾಗಿ ಉದ್ದೇಶಿಸಲಾಗಿದೆ ಎಂದು ಹೇಳಿದೆ.

# ಸಮರಸ ಜೀವನವೇ ದಾಂಪತ್ಯ: ಪ್ರೊ.ಶಿವರಾಜ ಪಾಟೀಲ

**ಕಲಬುರಗಿ:ಫೆ.28:** ಜೀವನದ ಮಹತ್ವ ಘಟ್ಟ ವಿವಾಹ.ಇದನ್ನು ವೈವಾಹಿಕ ಬದುಕು ಸರ್ವ ಶ್ರೇಷ್ಠ.ಇಲ್ಲಿ ಯಾರು ಸಂಸಾರ ಬಿಟ್ಟು ಬದುಕೆಂದು ಬೋಧಿಸಲಿಲ್ಲ.ಸಂಸಾರದಲ್ಲಿದ್ದೂ ಜೀವಿಸಬಹುದೆಂದು ಸಾರಿದ್ದಾರೆ.ನಮ್ಮ ಕುಟುಂಬ, ಸಮಾಜ, ಸಾಮರಸ್ಯ ಹೊಂದಿದರೆ ಸಮರಸವೇ ದಾಂಪತ್ಯ ವಾಗುತ್ತದೆ.ಸತಿ- ಪತಿ ಒಂದಾಗಿ ಜೀವನ ಕಂಡರೆ ವೃದ್ಧಾಶ್ರಮ ಅನಾಥಶ್ರಮ ಮುಕ್ತವಾಗುವುದೆಂದು ಹಿರಿಯ ಸಾಹಿತಿ,ಚಿಂತಕ ಪ್ರೊ.ಶಿವರಾಜ ಪಾಟೀಲ ಅಭಿಮತ ವ್ಯಕ್ತಪಡಿಸಿದರು.

ಕಲಾ ಮಂಡಳದಲ್ಲಿ ಜಿಲ್ಲಾ ಸಿರಿಗನ್ನಡ ವೇದಿಕೆ ಹಮ್ಮಿಕೊಂಡ ದಾಂಪತ್ಯ ಸಿರಿ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು ಬದುಕು ಹಸನಾಗಲು ಸಂತೃಪ್ತ ಜೀವನ ಕಾಣಬೇಕು.ಎಂದು ವಿಘಟನೆ ಆಗದೇ ಸಂಘಟಿತ ರಾಗಿದಾಗ ಜೀವನ ಸಾರ್ಥಕ ಎಂದರು.ಕೇಂದ್ರ ಸಾಹಿತ್ಯ ಅಕಾಡೆಮಿ ಕನ್ನಡ ಸಲಹಾ ಸಮಿತಿ ಸದಸ್ಯೆ ಸಾಹಿತಿ ಡಾ.ಜಯದೇವಿ ಗಾಯಕವಾಡ ಸಮಾರಂಭ ಉದ್ಘಾಟಿಸಿ ಮಾತನಾಡಿ ಬದುಕಿನ ಬಹು ಮುಖ್ಯವಾದ್ದು ದಾಂಪತ್ಯ. ಸುದೀರ್ಘ ಸಂಸಾರ ನಡೆಸಿ ತಮ್ಮ ಬದುಕು ಹಸನಾಗಿಸಿಕೊಂಡವರು ಬಹು ಕಡಿಮೆ. ಅಂತದರಲ್ಲೂ ತಮ್ಮ ಬಾಳು ಹಸನಾಗಿಸಿಕೊಂಡವರು ಇತರರಿಗೆ ದಾರಿ ದೀಪವೆಂದರು. ಅಧ್ಯಕ್ಷತೆ ವಹಿಸಿದ ಸಿರಿಗನ್ನಡ ವೇದಿಕೆ ಅಧ್ಯಕ್ಷ ಡಾ.ಗವಿ ಸಿದ್ಧಪ್ಪ ಪಾಟೀಲ ಮಾತನಾಡಿ ಮನುಷ್ಯ ನಾಗರಿಕನಾದ ಮೇಲೆ ಮದುವೆ ಕಲ್ಪನೆ ಬಂತು.ಜನಪದರಿಂದ ಹಿಡಿದು ಶರಣರ,ದಾಸರು,ಕವಿಗಳು ಸಹ ದಾಂಪತ್ಯ ಬಗ್ಗೆ ಬರೆದಿದ್ದಾರೆ.ಶ್ರೀಮತಿ ಕಲ್ಪನಾ ಸಂತೋಷಕುಮಾರ ಪಾಟೀಲ ಅವರು ಕಾಯಕ ಜೀವಿಯಾಗಿ,ಶಿಕ್ಷಣ,



ಸಾಮಾಜಿಕ,ಧಾರ್ಮಿಕ ಕೊಡುಗೆ ಅಪಾರ ಜೊತೆಗೆ ಅವರ ಇಪ್ಪತ್ತಾರನೇ ವಿವಾಹ ವಾರ್ಷಿಕೋತ್ಸವ ಸಾಮಾನ್ಯ ಮಾತಲ್ಲವೆಂದರು.ದಾಂಪತ್ಯ ಸಿರಿ ಪ್ರಶಸ್ತಿ ಪುರಸ್ಕೃತರು: ಶ್ರೀಮತಿ ಕಲ್ಪನಾ ಸಂತೋಷ ಪಾಟೀಲ, ಶ್ರೀಮತಿ ಸವಿತಾ ಬಾಬುರಾವ ಜಮಾದಾರ,ಶ್ರೀಮತಿ ಪ್ರೀತಿ ಸಿದ್ಧಲಿಂಗ ಕೊನೇಕ, ಶ್ರೀಮತಿ ಸಂಧ್ಯಾ ಸುರೇಶ ಕಾನೇಕರ, ಶ್ರೀಮತಿ ಸುಜಾತ ಚಿನ್ನಾ ಆಶಪ್ಪ ಅವರಿಗೆ ಪ್ರದಾನ ಮಾಡಲಾಯಿತು

ಡಾ.ಪೀರಪ್ಪ ಸಜ್ಜನ ಪ್ರಾರ್ಥನೆ ಗೀತೆ ಹಾಡಿದರು, ಕು.ವಿಭಾಶ್ರೀ ಶ್ಲೋಕ ಹೇಳಿದರು.ಡಾ.ಸಿದ್ದಪ್ಪ ಹೊಸಮನಿ ಸ್ವಾಗತಿಸಿದರು, ಡಾ.ರಾಜಕುಮಾರ ಮಾಳಗೆ ನಿರೂಪಿಸಿದರು, ಡಾ.ಶೀಲಾದೇವಿ ಬಿರಾದಾರ ವಂದಿಸಿದರು.ಸಂಗಮೇಶ್ವರ ಮನ್ನಳ್ಳಿ,ರಾಜನ ಝುಳಕಿ, ಮಲ್ಲಮ್ಮ ಶಿವರಾಜ ಕಾಳಗಿ,ಶ್ರೀನಿವಾಸ ಕುಲಕರ್ಣಿ,ಶರಣ ಟೆಂಗಳಿ,ಶ್ರೀಮತಿ ಸ್ನೇಹ ಭೀಮಳಗಿ,ಶಿವಶರಣಪ್ಪ ಬೆಳ್ಳಿ,ಇತರರು ಉಪಸ್ಥಿತಿ ಇದ್ದರು.

# ಮಲ್ಲಿಕಾರ್ಜುನ ಮುತ್ಯಾ ವಿರುದ್ಧ ದಾಖಲಾದ ಸುಳ್ಳು ಪೋಕ್ಸೋ ಪ್ರಕರಣ ಹಿಂದಕ್ಕೆ ಪಡೆಯಲು ಒತ್ತಾಯ




**ಚಿತ್ತಾಪುರ;ಫೆ.28**: ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಮಹಲರೋಜ ಗ್ರಾಮದ ಮಲ್ಲಿಕಾರ್ಜುನ ಮುತ್ಯಾ ಅವರ ವಿರುದ್ಧ ದಾಖಲಾದ ಸುಳ್ಳು ಪೋಕ್ಸೋ ಪ್ರಕರಣ ಹಿಂದಕ್ಕೆ ಪಡೆದು ರದ್ದುಪಡಿಸಬೇಕು. ಸುಳ್ಳು ಪ್ರಕರಣ ದಾಖಲಿಸಿದ ಮತ್ತು ಅದಕ್ಕೆ ಪ್ರೋತ್ಸಾಹಿಸಿರುವ ಅಧಿಕಾರಿಗಳ, ಬಾಲಕಿಯ ಮತ್ತು ಬಾಲಕಿಯ ಕುಟುಂಬದ ಮಾನ ಹರಾಜು ಮಾಡಿದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಕೋಲಿ ಸಮಾಜದ ತಾಲೂಕು ಅಧ್ಯಕ್ಷ ನಿಂಗಣ್ಣ ಹೇಗಲೇರಿ ಅವರ ನೇತೃತ್ವದಲ್ಲಿ ಮುಖಂಡರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ನಂತರ ಮಾತನಾಡಿದ ಅವರು, ಯಾದಗಿರಿ ಜಿಲ್ಲೆಯ ಶಹಾಪುರ ತಾಲೂಕಿನ ಮಹಲರೋಜ ಗ್ರಾಮದಲ್ಲಿನ ಮಲ್ಲಿಕಾರ್ಜುನ ಮುತ್ಯಾ ಅವರು ಭಕ್ತರ ಪಾಲಿನ ಆರಾಧ್ಯರಾಗಿದ್ದಾರೆ. ಅಪಾರ ಸಂಖ್ಯೆಯಲ್ಲಿ ಭಕ್ತರು ಅವರ ಮಠಕ್ಕೆ ಹೋಗಿ ದರ್ಶನ ಪಡೆದು ತಮ್ಮ ಕಷ್ಟ, ನೋವು, ದುಃಖ ತೋಡಿಕೊಂಡು ಪರಿಹಾರ ಕಂಡುಕೊಳ್ಳುತ್ತಾರೆ. ಮಲ್ಲಿಕಾರ್ಜುನ ಮುತ್ಯಾ ಅವರ ಜನಪ್ರಿಯತೆ ಹೆಚ್ಚಾಗಿದೆ. ಪರಿಸ್ಥಿತಿ ಹೀಗಿರುವಾಗ ಮಠಕ್ಕೆ ಬಂದಿದ್ದ ಬಾಲಕಿಯೊಬ್ಬಳನ್ನು ಮಲ್ಲಿಕಾರ್ಜುನ ಮುತ್ಯಾ ಅವರು ಒಬ್ಬ ತಂದೆ ತನ್ನ ಮಕ್ಕಳಿಗೆ ತೋರುವ ಮಕ್ಕಳ ಮೇಲಿನ ಸಹಜ ಪ್ರೀತಿ ತೋರಿಸಿದ್ದಾರೆ ಎಂದರು. ಬಾಲಕಿಯ ತಾಯಿ, ತಂದೆ, ಚಿಕ್ಕಪ್ಪ ಆ ಸಂದರ್ಭದಲ್ಲಿ ಇದ್ದು ತಮ್ಮ ಬಾಲಿಕಿಗೆ ಮುತ್ಯಾ ಅವರು ತೋರಿದ ಪ್ರೀತಿ ಕಂಡು ಸಂಭ್ರಮಿಸಿ ಸಂತೋಷಪಟ್ಟಿದ್ದಾರೆ. ವಿಡಿಯೋ ಸಹ ಮಾಡಿಕೊಂಡಿದ್ದಾರೆ. ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ. ವಿಡಿಯೋ ನೋಡಿದ ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷರು ವಿಡಿಯೋದ ಸತ್ಯಾಸತ್ಯತೆಯನ್ನು ಅರಿತುಕೊಳ್ಳದೆ, ಪರಿಶೀಲನೆಗೆ ಸೂಚಿಸದೆ ಶ್ರೀಗಳ ವಿರುದ್ಧ ಪ್ರಕರಣ ದಾಖಲಿಸಲು ಮುಂದಾಗಿರುವುದು ಕಾನೂನು ಬಾಹಿರ. ಅಲ್ಲದೆ ಸಾಮಾಜಿಕ ಜಾಲತಾಣದಲ್ಲಿ ಹರಡಿದ ವಿಡಿಯೋ ಮತ್ತು ವದಂತಿ ಆಧರಿಸಿ ಮತ್ತು ಸುಳ್ಳು ವರದಿ ನಂಬಿಕೊಂಡು ಯಾದಗಿರಿ ಜಿಲ್ಲಾಡಳಿತ ಮಲ್ಲಿಕಾರ್ಜುನ ಮುತ್ಯಾ ಅವರ ವಿರುದ್ಧ ನಿಲುವು ತಾಳಿದ್ದು ಅಧಿಕಾರ ದುರುಪಯೋಗ ಮತ್ತು ಬಾಲಕಿಯ, ಬಾಲಕಿಯ ಕುಟುಂಬದ ಮಾನ, ಮರ್ಯಾದೆ, ಘನತೆ, ಗೌರವಕ್ಕೆ ಧಕ್ಕೆ ತಂದು ಸಾರ್ವಜನಿಕವಾಗಿ ಕಳಂಕ ಅಂಟಿಸಿದಂತಾಗಿದಲ್ಲದೆ ಮಾನಹಾನಿ ಮಾಡಿದೆ ಹೀಗಾಗಿ ಇದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ ಎಂದರು.

ಪೋಕ್ಸೋ ಕಾಯ್ದೆಯನ್ನು ಆಡಳಿತವು ತನ್ನ ಮೂಗಿನ ನೇರಕ್ಕೆ ವ್ಯಾಖ್ಯಾನಿಸಿಕೊಂಡು, ಅರ್ಥೈಸಿಕೊಂಡು, ಪೋಕ್ಸೋ ಕಾಯ್ದೆ ನಿಯಮ ಉಲ್ಲಂಘಿಸಿ ಮುತ್ಯಾ ಅವರ ಹೆಸರಿಗೆ ಕಳಂಕ ತರುವ ಅಕ್ಷಮ್ಯ ಅಪರಾಧವೆಸಗಿದೆ. ಅದನ್ನು ಸಮಾಜವು ಬಲವಾಗಿ ವಿರೋಧಿಸುತ್ತದೆ ಎಂದರು.

ಮಹಲರೋಜ ಮಲ್ಲಿಕಾರ್ಜುನ ಮುತ್ಯಾ ಅವರ ವಿರುದ್ಧ ದಾಖಲಿಸಿರುವ ಸುಳ್ಳು ಪೋಕ್ಸೋ ಪ್ರಕರಣ ಸರ್ಕಾರ ತಕ್ಷಣ ಹಿಂದಕ್ಕೆ ಪಡೆದು ರದ್ದುಪಡಿಸಬೇಕು. ಪೋಕ್ಸೋ ಕಾಯ್ದೆ ನಿಯಮಗಳಿಗೆ ವಿರುದ್ಧವಾಗಿ ಪೊಲೀಸ್ ಠಾಣೆಗೆ ದೂರು ನೀಡಿರುವ ಸಿಡಿಪಿಒ ಅವರನ್ನು ತಕ್ಷಣ ಸೇವೆಯಿಂದ ಅಮಾನತುಗೊಳಿಸಿ ಅವರ ವಿರುದ್ಧ ಎಫ್.ಐ.ಆರ್ ದಾಖಲಿಸಬೇಕು. ಪೋಕ್ಸೋ ಕಾಯ್ದೆಯ ಸೆಕ್ಷನ್ 3, 5, 7, 11 ರಂತೆ ಯಾವುದೇ ಘಟನೆ ನಡೆಯದಿದ್ದರೂ ಕೇವಲ ಸಿಡಿಪಿಒ ಅವರ ವರದಿ ಆಧರಿಸಿ, ಯಾವುದೇ ಪರಿಶೀಲನೆ, ತಪಾಸಣೆ ಮಾಡದೆ ಸೆಕ್ಷನ್ 12 ರಡಿ ಎಫ್.ಐ.ಆರ್ ದಾಖಲಿಸಿಕೊಂಡು ಸೆಕ್ಷನ್ 24, 25, 27 ಅನ್ನು ಪಾಲಿಸದೆ ದಿವ್ಯ ನಿರ್ಲಕ್ಷ್ಯ ತೋರಿರುವ ಗೋಗಿ ಪೊಲೀಸ್ ಠಾಣೆಯ ಠಾಣಾಧಿಕಾರಿಯನ್ನು ತಕ್ಷಣ ಅಮಾನತುಗೊಳಿಸಬೇಕು ಎಂದು ಆಗ್ರಹಿಸಿದರು.

ಸರ್ಕಾರವು ಪ್ರಕರಣವನ್ನು ಸಾಮಾಜಿಕ ಹಿತದೃಷ್ಟಿಯಿಂದ ಗಂಭೀರವಾಗಿ ಪರಿಗಣಿಸಿ ಪ್ರಕರಣಕ್ಕೆ ಸಂಬಂಧಿದಂತೆ ಪೋಕ್ಸೋ ಕಾಯ್ದೆ ಮೀರಿ ಅಧಿಕಾರ ಚಲಾಯಿಸಿದ ಯಾದಗಿರಿ ಜಿಲ್ಲಾಧಿಕಾರಿ ಅಧ್ಯಕ್ಷತೆಯ ಜಿಲ್ಲಾಮಟ್ಟದ ಸಮನ್ವಯ ಸಮಿತಿ ಮತ್ತು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಕ್ರಮಕ್ಕೆ ಛಿಮಾರಿ ಹಾಕಬೇಕು ಮತ್ತು ಎಲ್ಲಾ ಅಧಿಕಾರಿಗಳ ವಿರುದ್ಧ ಸರ್ಕಾರ ಶಿಸ್ತು ಕ್ರಮ ಕೈಗೊಳ್ಳಬೇಕು. ಮಹಾಲರೋಜ ಮುತ್ಯಾ ಅವರನ್ನು ಸುಳ್ಳು ಪೋಕ್ಸೋ ಪ್ರಕರಣದಲಿ ಸಿಲುಕುವಂತೆ ಮಾಡಿ ಅಧಿಕಾರ ದುರ್ಬಳಕೆ ಮಾಡಿಕೊಂಡಿರುವ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷರನ್ನು ತಕ್ಷಣ ಹುದ್ದೆಯಿಂದ ತೆಗೆದು ಹಾಕಬೇಕು. ಬೇಷರತ್ ಕ್ಷಮೆ ಕೋರುವಂತೆ ಸರ್ಕಾರ ಸೂಚಿಸಬೇಕು. ಪೋಕ್ಸೋ ಕಾಯ್ದೆ ಸೆಕ್ಷನ್ 23 ಉಲ್ಲಂಘನೆ ಮಾಡಿ ಬಾಲಕಿಯ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರ ಮಾಡಿ ಸಾರ್ವಜನಿಕವಾಗಿ ಮಾನ, ಮರ್ಯಾದೆ, ಘನತೆ, ಗೌರವ ಹಾಳು ಮಾಡಿದ, ಅನಾವಶ್ಯಕ ವಿಶ್ಲೇಷಣೆ ಮಾಡಿದ ಮಾಧ್ಯಮಗಳ ವಿರುದ್ಧ ಮುಲಾಜಿಲ್ಲದೆ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಅಂತಹವರ ವಿರುದ್ಧ ಸುಳ್ಳು ಸುದ್ದಿ ಹರಡಿದ ಆರೋಪದಡಿ ಪ್ರಕರಣ ದಾಖಲಿಸಬೇಕು. ಒಂದು ವೇಳೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಎಚ್ಚೆತ್ತುಕೊಳ್ಳದೆ ಕಡೆಗಣಿಸಿದರೆ ಯಾದಗಿರಿ ಚಲೋ ಚಳುವಳಿ ಹಮ್ಮಿಕೊಂಡು ಉಗ್ರವಾಗಿ ಹೋರಾಟ ಮಾಡಬೇಕಾಗುತ್ತದೆ ಎಂದರು.

ನಂತರ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕೋಲಿ ಸಮಾಜದ ಗೌರವಾಧ್ಯಕ್ಷ ರಾಮಲಿಂಗ ಬಾನಾರ್, ಕರಣಕುಮಾರ್ ಅಲ್ಲೂರ್, ಹಣಮಂತ ಸಂಕನೂರ್, ಮಲ್ಲಿಕಾರ್ಜುನ ಎಮ್ಮೇನೂರ್, ಭೀಮು ಹೊತಿನಮಡಿ, ರಾಜು ಹೋಳಿಕಟ್ಟಿ, ಮಲ್ಲಿಕಾರ್ಜುನ ಅಲ್ಲೂರಕರ್, ಸುರೇಶ ಬೆನಕನಳ್ಳಿ, ದೇವಿಂದ್ರ ಅಣಕಲ್, ಪ್ರಭು ಹಲಕಟ್ಟಿ, ಭಾಗಣ್ಣ ಹಲಕಟ್ಟಿ, ಮಹಿಪಾಲ್, ದಶರಥ ದೊಡ್ಮನಿ, ಗೂಳಿ ಡಿಗ್ಗಿ, ರಾಜು ಹುಲಿ, ಭೀಮು ಸೇರಿದಂತೆ ಅನೇಕ ಮುಖಂಡರು ಹಾಗೂ ಪದಾಧಿಕಾರಿಗಳು ಇದ್ದರು.

# ಟ್ಯಾಟೂ ಹಾಕಿಸಿಕೊಳ್ಳುವ ಮುನ್ನ ಏಡ್ಸಿಂದ ಜಾಗೃತರಾಗಿ: ಸೋಮನಾಥ ಬಿರಾದಾರ



**ಬೀದರ:ಫೆ.28:** ವಿವಿಧ ಜಾತ್ರೆಗಳಲ್ಲಿ ಹಾಗೂ ರಸ್ತೆ ಮೇಲೆ ಯುವಕ ಯುವತಿಯರು ಕೈಮೇಲೆ ಟ್ಯಾಟೂ ಹಾಕಿಸಿಕೊಳ್ಳುವ ಮುನ್ನಡ ಏಡ್ಸ್ ಎಚ್ಐವಿ ರೋಗದಿಂದ ಜಾಗರೂಕರಾಗಿರಬೇಕು. ಇದರಿಂದಲೂ ಏಡ್ಸ್ ಸಮಾಜದಲ್ಲಿ ಹರಡುತ್ತಿದೆ ಎಂದು ಕರ್ನಾಟಕ ಕಾಲೇಜಿನ ಪ್ರಾಚಾರ್ಯರಾದ ಸೋಮನಾಥ ಬಿರಾದಾರ ತಿಳಿಸಿದರು.

ಕರ್ನಾಟಕ ಕಲಾ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಇಂದು ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಬೀದರ, ಕರ್ನಾಟಕ ರಾಜ್ಯ ಏಡ್ಸ್ ಪ್ರೈವೆನ್ಷನ್ ಸೊಸೈಟಿ, ಬೆಂಗಳೂರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ತಡೆಗಟ್ಟುವ ಘಟಕ, ಹಾಗೂ ಕರ್ನಾಟಕ ಕಾಲೇಜಿನ ಸಹಯೋಗದೊಂದಿಗೆ ರೆಡ್ ರಿಬ್ಬನ್ ಕ್ಲಬ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಕ್ತದಾನ ಮಾಡುವಾಗ, ರಕ್ತ ಪರೀಕ್ಷೆ ಮಾಡಿಸಿಕೊಳ್ಳುವಾಗ ಜಾಗೃತಿ ವಹಿಸಬೇಕು. ನಮ್ಮ ಅಕ್ಕಪಕ್ಕದ ಮನೆಯವರಿಗೆ, ಸ್ನೇಹಿತರಿಗೆ ಸುರಕ್ಷತೆ ಕುರಿತು ತಿಳಿಸಬೇಕೆಂದು ಸಲಹೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಜಿಲ್ಲಾ ಆರೋಗ್ಯ ಇಲಾಖೆಯ ಆಪ್ತ ಸಮಾಲೋಚಕಿ ಶ್ರೀಮತಿ ಸುನೀತಾ ಮಾತನಾಡಿ ಬೀದರ ಜಿಲ್ಲೆಯಲ್ಲಿ ಎಚ್ಐವಿ ಏಡ್ಸ್ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದೆ. ಇಂದು ಕೆಲವು ಪ್ರದೇಶಗಳಲ್ಲಿ ವಿಶೇಷವಾಗಿ ಸೌದತ್ತಿ ಯಲ್ಲಮ್ಮ ಕಡೆ ದೇವದಾಸಿ ಪದ್ಧತಿ ಇರುವ ಕಡೆ ಸೋಂಕು ಹೆಚ್ಚಾಗುತ್ತಾ ಹೋಗುತ್ತಿದೆ. ಇದನ್ನು ತಡೆಯುವ ಜವಾಬ್ದಾರಿ ಎಲ್ಲರ ಮೇಲಿದೆ. ವಿಶೇಷವಾಗಿ ಕಾಲೇಜಿನ ಯುವಕ ಯುವತಿಯರು ತಾವು ಜ್ಞಾನ ಪಡೆದುಕೊಳ್ಳುವುದರ ಜೊತೆಗೆ ಸಮಾಜದಲ್ಲಿ ಜಾಗೃತಿ ಮೂಡಿಸಬೇಕೆಂದು ತಿಳಿಸಿದರು.

ಕಾಲೇಜಿನ ಎ ಘಟಕದ ಎನ್.ಎಸ್.ಎಸ್ ಅಧಿಕಾರಿ ಡಾ. ದಿಲೀಪ್ ಮಾಲೆ ಪ್ರಸ್ತಾವಿಕವಾಗಿ ಮಾತನಾಡಿ ನಮ್ಮ ಕಾಲೇಜಿನಲ್ಲಿ ಪ್ರತಿ ವರ್ಷ ರೆಡ್ ರಿಬ್ಬನ್ ಕ್ಲಬ್ ಕಾರ್ಯಕ್ರಮವನ್ನು ಆಯೋಜಿಸಿ ವಿದ್ಯಾರ್ಥಿಗಳಿಗೆ ಏಡ್ಸ್ ಕುರಿತು ಅರಿವು ಮೂಡಿಸಲಾಗುತ್ತಿದೆ. ಪದವಿ ವಿದ್ಯಾರ್ಥಿಗಳಲ್ಲಿ ಹೆಚ್ಚು ಹೆಚ್ಚು ಅರಿವು ಮೂಡಿಸಿದಾಗ ಏಡ್ಸ್ ಹರಡದಂತೆ ತಡೆಗಟ್ಟಬಹುದು. ಯುವ ಜನತೆ ಕ್ಷಣಿಕ ಸುಖಕ್ಕಾಗಿ ಅಸುರಕ್ಷಿತ ಲೈಂಗಿಕ ಸಂಪರ್ಕ ಮಾಡುವದರ ಮೂಲಕ ಏಡ್ಸ್ ರೋಗಕ್ಕೆ ತುತ್ತಾಗುತ್ತಿದ್ದಾರೆ. ಇದನ್ನು ನಿಯಂತ್ರಿಸುವ ಸಲುವಾಗಿ ಸೋಂಕನ್ನು ಬರದಂತೆ ತಡೆಯುವ ಅವಶ್ಯಕತೆ ಇದೆ ಎಂದು ಹೇಳಿದರು.

ರೆಡ್ ರಿಬ್ಬನ್ ಕ್ಲಬ್ ಕಾರ್ಯಕ್ರಮದ ಅಂಗವಾಗಿ "ಸಾಮಾಜಿಕ ಪಿಡುಗಾಗಿ ಎಚ್ಐವಿ/ಏಡ್ಸ್ ರೋಗ" ಎಂಬ ವಿಷಯದಲ್ಲಿ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ವಿಜೇತರಾದ ಪೀಟರ್ ಬಿ.ಎ. (ಪ್ರಥಮ), ಕೀರ್ತನಾ ಬಿ.ಎಸ್. (ದ್ವಿತೀಯ), ಹಾಗೂ ಭುವನೇಶ್ವರಿ ಬಿ. ಎ (ತೃತೀಯ) ವಿಜೇತರಿಗೆ ಎನ್.ಎಸ್.ಎಸ್ ಬಿ ಘಟಕದ ಅಧಿಕಾರಿ ಪರಮೇಶ್ವರ್ ಬಹುಮಾನ ವಿತರಿಸಿದರು. ಪೀಠರ್ ನಿರೂಪಿಸಿದರೆ, ಶ್ರೀರಕ್ಷಾ ವಂದಿಸಿದರು. ಹಾಗೂ ಐಕ್ಯೂಎಸಿ ಸಂಯೋಜಕಿ ಡಾ. ಸೋಮೇಶ್ವರಿ ಮುದ್ದಾ, ಎನ್.ಸಿ.ಸಿ ಅಧಿಕಾರಿ ಡಾ. ಸಂತೋಷ ನಾಯಕ ಎನ್ಎಸ್ಎಸ್ ಅಧಿಕಾರಿ, ಆನಂದ, ಬ್ಲೆಸಿ ರಾಣಿ, ಜ್ಯೋತಿ ರಾಂಪುರೆ, ಶ್ರೀಮತಿ ಲಕ್ಷ್ಮೀ ಕುಂಬಾರ, ಮಧುಸೂಧನ ಕುಲಕರ್ಣಿ, ಎನ್.ಎಸ್.ಎಸ್ ಸ್ವಯಂ ಸೇವಕರು ಸೇರಿದಂತೆ ಇನ್ನಿತರರು ಸಮಾರಂಭದಲ್ಲಿ ಭಾಗವಹಿಸಿದರು.

## ಹಣೆಯಲ್ಲಿ ಬರೆದಿದ್ದರೆ ನನ್ನ ಅಣ್ಣ ಸಿಎಂ ಆಗ್ತಾರೆ: ಡಿಕೆಸು

**ಬೆಂಗಳೂರು, ಫೆ. 28:** ಹಣೆ ಬರಹದಲ್ಲಿ ಬರೆದಿದ್ದರೆ ನನ್ನ ಅಣ್ಣ ಸಿಎಂ ಆಗುತ್ತಾರೆ. ಹಣೆಬರಹ ಇಲ್ಲ ಎಂದರೆ ಯಾರೂ ಏನೂ ಮಾಡಲು ಆಗುವುದಿಲ್ಲ" ಎಂದು ಬಮೂಲ್ ಅಧ್ಯಕ್ಷರಾದ ಡಿ.ಕೆ. ಸುರೇಶ್ ಅವರು ತಿಳಿಸಿದರು.ಸದಾಶಿವನಗರ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಅತನಾಡಿದ ಅವರು, "ತ್ಯಾಗ ಮಾಡಲು ಶಸ್ತ್ರ ಇರಬೇಕಲ್ಲವೇ? ಶಸ್ತ್ರವೇ ಇಲ್ಲವಲ್ಲ. ಶಸ್ತ್ರ ಇದೆ ಎಂದು ನಾನು ಯಾವಾಗ ಹೇಳಿದ್ದೆ. ಶಸ್ತ್ರವೇ ಇಲ್ಲದಿದ್ದಾಗ ಶಸ್ತ್ರತ್ಯಾಗದ ಪ್ರಶ್ನೆಯೇ ಬಾರದು ಎಂದು ಕೇಳಿದರು.ತಾಳ್ಮೆಯ ಅಸ್ತ್ರ ಇದೆ ಎಂದಿದ್ದೀರಿ ಎಂದಾಗ, "ಈಗಲೂ ತಾಳ್ಮೆ ಇರಲಿ ಎಂದು ಹೇಳುತ್ತಿದ್ದೇನೆ" ಎಂದರು. ಶಸ್ತ್ರ, ತಂತ್ರ, ಯುದ್ಧ ಇಲ್ಲದೇ ಬಗೆಹರಿಯುವುದೇ ಎಂಬ ಪ್ರಶ್ನೆಗೆ, "ಇದು ರಾಜಕಾರಣ. ಇಲ್ಲಿ ಶಸ್ತ್ರ ಹಾಗೂ ಅಸ್ತ್ರ ಬೇಕಾಗಿಲ್ಲ" ಎಂದರು.ಶಾಸಕರು ದೆಹಲಿಗೆ ಹೋಗುವ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಈ ಬಗ್ಗೆ ಶಾಸಕರನ್ನೇ ಕೇಳಿ" ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು,ನಾನು ಊರಲ್ಲಿ ಇರಲಿಲ್ಲ. ನನಗೆ ಈ ಬಗ್ಗೆ ಮಾಹಿತಿ ಇಲ್ಲ. ಅವರು ಯಾವ ತೀರ್ಮಾನ ಕೈಗೊಂಡಿದ್ದಾರೆ, ಯಾವ ಹೇಳಿಕೆ ಕೊಟ್ಟಿದ್ದಾರೆ ಎಂಬುದೂ ಗೊತ್ತಿಲ್ಲ. ಇದು ಅವರ ವೈಯಕ್ತಿಕ ವಿಚಾರ. ಪಕ್ಷ ಅದನ್ನು ಗಮನಿಸಲಿದೆ" ಶಾಸಕ ಬಾಲಕೃಷ್ಣ ನಿವಾಸದಲ್ಲಿ ನಡೆದ ಡಿನ್ನರ್ ಮೀಟಿಂಗ್ ಕುರಿತು ಹೇಳಿದರು.ಶಾಸಕರ ಆಗ್ರಹದಲ್ಲಿ ನ್ಯಾಯ ಇದೆ ಅಲ್ಲವೇ ಎಂದು ಕೇಳಿದಾಗ, "ಶಾಸಕರ ವಿಚಾರಧಾರೆ ಅವರಿಗೆ ಹಾಗೂ ಸಂಬಂಧಿಸಿದ್ದೇ ಹೊರತು, ನನಗಲ್ಲ. ಪಕ್ಷ ಅವರ ವಿಚಾರಗಳನ್ನು ಗಮನಿಸಲಿದೆ. ನಾವು ಆ ವಿಚಾರದಲ್ಲಿ ಹೇಳಲು ಬರುವುದಿಲ್ಲ "ಎಲ್ಲದಕ್ಕೂ ತಾಳ್ಮೆ ಇರಲಿ" ಎಂದರು. ಸಿದ್ದರಾಮಯ್ಯ ಅವರನ್ನು ಬದಲಿಸುವುದಾದರೆ ದಲಿತ ಸಿಎಂ ಮಾಡಬೇಕು ಎಂಬ ಹೆಚ್.ಸಿ ಮಹದೇವಪ್ಪ ಅವರ ಹೇಳಿಕೆ ಬಗ್ಗೆ ಕೇಳಿದಾಗ, "ಎಲ್ಲರಿಗೂ ಆಸೆ ಇದೆ. ಇದರಲ್ಲಿ ತಪ್ಪೇನಿಲ್ಲ" ಎಂದರು. ನಿಮ್ಮ ಸಹೋದರರನ್ನು ಸಿಎಂ ಹುದ್ದೆಯಲ್ಲಿ ಕೂರಿಸಲು ನಿಮ್ಮ ಪ್ರಯತ್ನ ಹೇಗಿದೆ, ನಿಮ್ಮ ಬಳಿ ಶಾಸಕರ ಸಂಖ್ಯೆ ಹೆಚ್ಚಾಗಿದೆಯೇ ಎಂದು ಕೇಳಿದಾಗ, "ನನಗೆ ಆ ಬಗ್ಗೆ ಗೊತ್ತಿಲ್ಲ. ಶಾಸಕರ ವಿಚಾರ ಬಿಟ್ಟು ಬಮೂಲ್ ವಿಚಾರ ಏನಾದರೂ ಇದ್ದರೆ ಕೇಳಿ, ಪ್ರತಿಕ್ರಿಯೆ ನೀಡುವೆ' ಎಂದರು.ಮಾರ್ಚ್ 6 ರಂದು ಕೆಎಂಎಫ್ ಚುನಾವಣೆ ನಡೆಯಲಿದೆಯೇ ಎಂದು ಕೇಳಿದಾಗ, "ಚುನಾವಣೆ ಯಾವಾಗ ಮಾಡಬೇಕು ಎಂದು ಅಧಿಕಾರಿಗಳು ತೀರ್ಮಾನ ಮಾಡುತ್ತಾರೆ. ಆಗ ಪಕ್ಷ ತೀರ್ಮಾನ ಮಾಡುವ ವ್ಯಕ್ತಿಯೇ ಸ್ಪರ್ಧೆ ಮಾಡಲಿದ್ದಾರೆ" ಎಂದರು.

# ಪಾಲಕರು ಮೊಬೈಲ್‌ನಿಂದ ದೂರವಿರಿ: ಜಯಶ್ರೀ ಮತ್ತಿಮಡು

**ಕಲಬುರಗಿ:ಫೆ.28:**ಈ ಶತಮಾನದ ಮಕ್ಕಳು ಅತ್ಯಂತ ಕ್ರಿಯಾಶೀಲರಾಗಿದ್ದಾರೆ ಅವರ ಆಸಕ್ತಿಗೆ ಅನುಗುಣವಾಗಿ ಪಾಲಕರು ಮಕ್ಕಳ ಜೊತೆ ಬೆರೆಯಬೇಕು ಎಂದು ಕಲಬುರಗಿಯ ಸಮಾಜಸೇವಕಿ ಜಯಶ್ರೀ ಮತ್ತಿಮಡು ಅಭಿಪ್ರಾಯಪಟ್ಟರು.

ಬುಧುವಾರ ಕಲಬುರಗಿಯ ಗುಬ್ಬಿ ಕಾಲೋನಿಯಲ್ಲಿರುವ ಮಾತೋಶ್ರೀ ಸರೋಜಾ ಸುಭಾಷ ಗುತ್ತೇದಾರ ಪಬ್ಲಿಕ್ ಶಾಲೆಯ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸ್ವತ: ಪಾಲಕರೇ ಮಕ್ಕಳೆದುರು ಗಂಟೆಗಟ್ಟಲೆ ಮೊಬೈಲ್ ಹಿಡಿದು ಕುಳಿತುಕೊಳ್ಳುವುದರಿಂದ ಮಕ್ಕಳು ಮೋಹಕ್ಕೆ ಒಳಗಾಗುತ್ತಿದ್ದಾರೆ ಇದರಿಂದ ಮೊದಲು ಪಾಲಕರು ಅತಿಯಾದ ಮೊಬೈಲ್ ಬಳಕೆಯಿಂದ ದೂರವಿರಬೇಕು ಎಂದು ಸಲಹೆ ನೀಡಿದರು.ಮಕ್ಕಳ ಬಗ್ಗೆ ಪೊಷಕರಿಗೆ ಇರುವಷ್ಟೆ ಜವಾಬ್ದಾರಿ ಶಿಕ್ಷಕರಿಗೂ ಇರುತ್ತದೆ. ಮಕ್ಕಳು ಹೆಚ್ಚಿನ ಸಮಯ ಶಿಕ್ಷಕ ರೊಂದಿಗೆ ಶಾಲೆಯಲ್ಲಿ ಕಳೆಯುತ್ತಾರೆ. ಮಕ್ಕಳ ಮೇಲೆ ಶಿಕ್ಷಕರು ಪ್ರಭಾವ ಬೀರುವುದರಿಂದ ಮಕ್ಕಳ ಉತ್ತಮ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡುವಂತೆ ಹೇಳಿದರು. ಮಕ್ಕಳಿಗೆ ಪಠ್ಯಕ್ರಮ ಎಷ್ಟು ಮುಖ್ಯವೋ ಪಠ್ಯೇತರ ಚಟುವಟಿಕೆ ಅಷ್ಟೇ ಮುಖ್ಯ. ಪ್ರತಿಯೊಬ್ಬ ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಯಲ್ಲಿ ಪಾಲ್ಗೊಳ್ಳ ಬೇಕು. ಉತ್ತಮ ಶಿಕ್ಷಣದೊಂದಿಗೆ ಉತ್ತಮ ದೇಹದಾಢ್ಯ ಹಾಗೂ ಆರೋಗ್ಯ ಹೊಂದುವಂತೆ ತಿಳಿಸಿದರು.

ಸಂಸ್ಥೆಯ ಅಧ್ಯಕ್ಷ ಮಾಜಿ ಶಾಸಕ ಸುಭಾಷ್ ಗುತ್ತೇದಾರ ಮಾತನಾಡಿ, ನಾಗರಿಕ ಸಮಾಜದಲ್ಲಿ ಹಬ್ಬ ಹರಿದಿನ ಆಚರಿಸುವಂತೆ ಶಾಲಾ ಕಾಲೇಜುಗಳಲ್ಲಿ ವರ್ಷಕ್ಕೊಮ್ಮೆ ನಡೆಯುವ ವಾರ್ಷಿಕೋತ್ಸವ ಮಕ್ಕಳ ಪಾಲಿಗೆ ಹಬ್ಬದ ಸನ್ನಿವೇಶವನ್ನು ಸೃಷ್ಟಿ ಎಲ್ಲಾ ಧರ್ಮಗಳ ಸಮನ್ವಯತೆಯನ್ನು ಇಲ್ಲಿ ಕಾಣಲು ಸಾಧ್ಯವಿದೆ ಈ ಮೂಲಕ ಮಕ್ಕಳ ಪ್ರತಿಭಾ ದರ್ಶನ ಪೊಷಕರಿಗೆ ಆಗಲಿದೆ ಎಂದರುಮಕ್ಕಳನ್ನು ಓದಿಸುವ ವಿಚಾರದಲ್ಲಿ ಶಿಕ್ಷಕರಷ್ಟೆ ಪೊಷಕರದ್ದು ಕೂಡ ದೊಡ್ಡ ಜವಾಬ್ದಾರಿಯಿದೆ. ಮಕ್ಕಳ ಓದಿನ ಬಗ್ಗೆ ಪೊಷಕರು ಸರಿಯಾಗಿ ಗಮನಿಸಬೇಕು. ಬದ್ಧತೆ, ಶಿಸ್ತು, ಧೈರ್ಯ ಈ 3 ಗುಣಗಳನ್ನು ಮಕ್ಕಳಿಗೆ ಧಾರೆಯೆರಯಬೇಕು. ಯಾವ ಕಾರಣಕ್ಕೂ ಮಕ್ಕಳು ಓದುವಾಗ ಟಿವಿ ಹಾಕಬೇಡಿ. ನಿಶ್ಯಬ್ಧ ಪರಿಸರ ಇರಲಿ. ಮಕ್ಕಳ ಮುಂದೆ ಜಗಳ ಆಡಬೇಡಿ.ಇದು ಮಕ್ಕಳ ಮನಸ್ಸಿನ ಮೇಲೆ ಪ್ರತಿ ಕೂಲ ಪ್ರಭಾವ ಬೀರುತ್ತದೆ ಎಂದು ಎಚ್ಚರಿಸಿದರು.

ಸಂಸ್ಥೆಯ ಆಡಳಿತಾಧಿಕಾರಿ ಹಣಮಂತ ಶೇರಿ, ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಿರುವ ಶಾಲೆಗಳ ಪೈಕಿ ನಮ್ಮ ಶಾಲೆ ಪ್ರಥಮ ಸ್ಥಾನದಲ್ಲಿ ನಿಲ್ಲಲಿದೆ. ಪಠ್ಯ ಶಿಕ್ಷಣದೊಟ್ಟಿಗೆ ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳನ್ನು ಕಲಿಸುತ್ತಿರುವುದು ಹೆಮ್ಮೆಯೆನಿಸಿದೆ. ಇದೇ ಕಾರಣಕ್ಕಾಗಿ ಇಲ್ಲಿ ದಾಖಲಾತಿಗೆ ಕೊರತೆಯಾಗಿಲ್ಲ ಎಂದು ಬಣ್ಣಿಸಿದರು. ಶಿಕ್ಷಣದಲ್ಲಿ ತಾಂತ್ರಿಕತೆಯಿರಬೇಕು. ಮೌಲ್ಯಗಳಿರ ಬೇಕು,ಕೌಶಲ್ಯಯುತ ಬೋಧನೆಗೆ ಒತ್ತು ನೀಡಬೇಕು. ಆಗ ಮಾತ್ರ ಮಕ್ಕಳು ದೇಶದ ಆಸ್ತಿ ಆಗುತ್ತಾರೆ. ಕಾಣದ ದೇವರನ್ನು ಪೂಜಿವ ಬದಲಿಗೆ ಕಣ್ಣಿಗೆ ಕಾಣುವ ತಂದೆ ತಾಯಿಯನ್ನು ಗೌರವಿಸಿ, ಪೂಜಿಸಲು ಮುಂದಾಗುತ್ತಾರೆ. ಮಕ್ಕಳು ಏನಾಗಬೇಕು ಎಂದು ನಿಮಗೆ ಕನಸಿದೆಯೋ ಅಂತಹ ಪರಿಸರ ಸೃಷ್ಟಿಸುವ ಮೂಲಕ ಪೊಷಕರು ಮಕ್ಕಳಿಗೆ ಮಾದರಿಯಾಗಬೇಕು. ಓದುವ ಸಮಯದಲ್ಲಿ ಟಿ.ವಿ.ಮೊಬೈಲ್ ಮೋಹ ಅಪ್ಪ ಅಮ್ಮನಿಗೂ ಬೇಡ, ಇಷ್ಟಾದರೆ ಮಕ್ಕಳೂ ಅದರಿಂದ ದೂರವಿರುತ್ತಾರೆ ಎಂದು ಕರೆ ನೀಡಿದರು.ಹಿರಿಯ ಸಮಾಜ ಸೇವಕಿ ಜ್ಯೋತಿ ಗುತ್ತೇದಾರ ಮಾತನಾಡಿ, ಪುರುಷನಿರಲಿ ಮಕ್ಕಳಿರಲಿ ಅವರ ಯಶಸ್ಸಿನ ಹಿಂದೆ ತಾಯಿ ಅಂದರೆ ಹೆಣ್ಣು ಇದ್ದೇ ಇರುತ್ತಾಳೆ. ಬಾಲ್ಯದಿಂದಲೇ ನಮ್ಮ ಮಕ್ಕಳಿಗೆ ಬೇರೆಯವರ ಹಕ್ಕಿನ ಉಲ್ಲಂಘನೆ ಮಾಡದಂತೆ, ನಮ್ಮ ಹಕ್ಕುಗಳ ಉಲ್ಲಂಘನೆಯೂ ಆಗದಂತೆ ಜಾಗೃತೆ ವಹಿಸುವ ಬಗ್ಗೆ ಕಲಿಸಬೇಕು. ಎರಡನೆಯದಾಗಿ ಎಮೋಷನಲ್ ಪ್ರಥಮ ಚಿಕಿತ್ಸೆ ನೀಡುವ ಬದಲು ಮಾನಸಿಕ ಪ್ರಥಮ ಚಿಕಿತ್ಸೆ ಕಲಿಸಿ. ಮೂರನೆಯದಾಗಿ ಭಯಮುಕ್ತ ಭಾರತ ಕಟ್ಟುವುದಕ್ಕೆ ಪೊಷಕರು ಕೈಜೋಡೊಡಿಸಬೇಕು. ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ತಡೆಯುವ ಭಾಗವಾಗಿ ಸಹಾಯ ಕೇಳುವ, ಸಹಾಯ ಮಾಡುವ ಕೌಶಲ್ಯ ಮಕ್ಕಳಿಗೆ ಕಲಿಸಬೇಕು ಎಂದರು.ಮಹಾನಗರ ಪಾಲಿಕೆ ಸದಸ್ಯ ಜಗದೇವ ಗುತ್ತೇದಾರ ಮಾತನಾಡಿ, ಮಕ್ಕಳ ಮನಸ್ಸು ಹತ್ತಿಯ ರೀತಿಯಿರುತ್ತದೆ. ಇದಕ್ಕೆ ಏನನ್ನು ಹಾಕುತ್ತೀರೋ ಅದನ್ನು ಹೀರಿ ಕೊಳ್ಳುವ ಗುಣಹೊಂದಿದೆ. ಹೀಗಾಗಿ ಸದಾಕಾಲ ಮಕ್ಕಳಿಗೆ ಗುಣಾತ್ಮಕ ಚಿಂತನೆಗಳನ್ನು ಮಕ್ಕಳಿಗೆ ಕಲಿಸಿ. ಮಗು ನಿನ್ನಲ್ಲಿ ಗುರಿಯಿದೆ. ಆ ಗುರಿ ಮುಟ್ಟುವ ಛಲವಿದೆ ನೀನು ಮಾಡುತ್ತೀಯಾ ಎಂದು ಬೆನ್ನು ತಟ್ಟುವ ಮೂಲಕ ಮಗುವಿನ ಅಂತರ್ಧನಿಯಾಗಿ ಅಪ್ಪ ಅಮ್ಮ ಕೆಲಸ ಮಾಡಿಬೇಕಿದೆ. ವಿನಾಕಾರಣ ಹೋಲಿಕೆ ಮಾಡಲೇಬೇಡಿ. ಮಕ್ಕಳು ನಿಮ್ಮ ಮಾತನ್ನು ಕೇಳಿ ಬದಲಾವಣೆ ಆಗುವುದಿಲ್ಲ, ಬದಲಿಗೆ ನಿಮ್ಮ ವರ್ತನೆ ನೋಡಿ ಕಲಿಯುತ್ತಾರೆ ಎಂದು ಕಿವಿ ಮಾತು ಹೇಳಿದರು.ಶಿಕ್ಷಕಿಯರಾದ ಪೂಜಾ, ಶಿವಲೀಲಾ ನಿರೂಪಿಸಿದರು. ಪ್ರಿಯಾಂಕಾ ಸ್ವಾಗತಿಸಿದರೆ, ಅರ್ಚನಾ ವಂದಿಸಿದರು. ಪ್ರಾಚಾರ್ಯೆ ಐಶ್ವರ್ಯಾ ದುರ್ಗೆ ಅಧ್ಯಕ್ಷತೆ ವಹಿಸಿದ್ದರು.

**Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.**
**Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE**